# ಪ್ರಯೋಗ ಪ್ರಣತಿ

## ಪ್ರಥಮ ಪಿ.ಯು.ಸಿ.

## ಕನ್ನಡ ಅಭ್ಯಾಸಪುಸ್ತಕ

೨೦೧೫ - ೨೦೧೬


**ಪದವಿ ಪೂರ್ವ ಶಿಕ್ಷಣ ಇಲಾಖೆ,**

ಮಲ್ಲೇಶ್ವರಂ, ಬೆಂಗಳೂರು - ೧೨

www.pue.kar.nic.in

© *Department of Pre-University Education* 2014-2015.

***Revised Edition - 2017***

*Printed on 80 GSM Maplitho paper*

**All Rights Are Reserved**

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

## ನಿರ್ದೇಶಕರ ಸಂದೇಶ

**ಆತ್ಮೀಯ ವಿದ್ಯಾರ್ಥಿಗಳೇ,**

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

**ಸಹಿ/-**
**ಸಿ.ಶಿಖಾ,** ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

# ಪಠ್ಯ ಪುಸ್ತಕ ರಚನಾ ಸಮಿತಿ


ಅಧ್ಯಕ್ಷರು

**ಡಾ. ಎಂ. ಎಲ್. ಶಂಕರಲಿಂಗಪ್ಪ,**
ಪ್ರಾಂಶುಪಾಲರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಹೆಸರಘಟ್ಟ, ಬೆಂಗಳೂರು – ೫೬೦ ೦೮೯.

**: ಸಂಚಾಲಕರು :**

**ಆರ್. ಆನಂದ ಪ್ರಕಾಶ್**
ಉಪನ್ಯಾಸಕರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಚಿಕ್ಕಬಳ್ಳಾಪುರ–೫೬೨೧೦೧.

**ಎಲ್. ಎಸ್. ಮುಕುಂದರಾಜ್,**
ಉಪನ್ಯಾಸಕರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಅತ್ತಿಗುಪ್ಪೆ, ಬೆಂಗಳೂರು.

**: ಸದಸ್ಯರು :**

**ಎನ್. ನಾಗಪ್ಪ**
ಪ್ರಾಂಶುಪಾಲರು,
ಸರ್ಕಾರಿ ಪ.ಪೂ. ಕಾಲೇಜು,
ಚಿಕ್ಕನಹಳ್ಳಿ, ತುಮಕೂರು ಜಿಲ್ಲೆ.

**ಎಂ.ಎಸ್. ಉಪ್ಪಿನ್**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಹುಮನಾಬಾದ್, ಬೀದರ್ ಜಿಲ್ಲೆ.

**ಜಿ.ರಾಮಚಂದ್ರ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ದೊಡ್ಡಬಳ್ಳಾಪುರ, ಬೆಂ.ಗ್ರಾ. ಜಿಲ್ಲೆ,

**ಎ. ಶ್ರೀಪ್ರಕಾಶ್**
ಉಪನ್ಯಾಸಕರು,
ಅರುಣ ಪ.ಪೂ. ಕಾಲೇಜು,
ಚೇರಂಬಾಣೆ, ಕೊಡಗು ಜಿಲ್ಲೆ.

**ಎಲ್. ಮಹಾಲಿಂಗಪ್ಪ**
ಉಪನ್ಯಾಸಕರು,
ಎಸ್.ಕೆ.ವಿ.ಎಸ್. ಮಹಿಳಾ ಪ.ಪೂ.ಕಾಲೇಜು
ತಿಪಟೂರು, ತುಮಕೂರು ಜಿಲ್ಲೆ.

**ಡಾ. ಪಿ. ಎಂ. ಹುಗ್ಗಿ**
ಉಪನ್ಯಾಸಕರು,
ಸರ್ಕಾರಿ ಪ.ಪೂ.ಕಾಲೇಜು,
ಮುಧೋಳ, ಬಾಗಲಕೋಟೆ ಜಿಲ್ಲೆ.

**ಬಿ. ಮಹೇಶ್ ಹರವೆ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ವೆಂಕಟಯ್ಯನ ಛತ್ರ, ಚಾಮರಾಜನಗರ ಜಿಲ್ಲೆ.

**ಸುಮಾ ಎಸ್.**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಉಡುಪಿ.

**ಕಲೀಮ್ ಉಲ್ಲಾ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬಿ. ಹೆಚ್. ರಸ್ತೆ, ಶಿವಮೊಗ್ಗ.

**ಡಾ. ವಾಸುದೇವ ಬೆಳ್ಳೆ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೊಕ್ಕಪಟ್ಟಣ,ಮಂಗಳೂರು, ದ.ಕ.ಜಿಲ್ಲೆ

**ಕೆಂಪೇಗೌಡ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಪೀಣ್ಯ, ಬೆಂಗಳೂರು.

**ಚಂದ್ರಶೇಖರ**
ಉಪನ್ಯಾಸಕರು,
ವಿಜಯ ಪ.ಪೂ. ಕಾಲೇಜು,
ಜಯನಗರ, ಬೆಂಗಳೂರು.

**ಡಾ. ಕೆ. ಸತ್ಯಪ್ರೇಮ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ರಥ ಬೀದಿ, ಮಂಗಳೂರು, ದ.ಕ. ಜಿಲ್ಲೆ.

**ಹೊ. ನ. ನೀಲಕಂಠೇಗೌಡ**
ಉಪನ್ಯಾಸಕರು,
ಸರ್ಕಾರಿ ಬಾಲಕಿಯರ ಪ.ಪೂ. ಕಾಲೇಜು,
ಬಸವನಗುಡಿ, ಬೆಂಗಳೂರು.

**ಎನ್. ಮುನಿರಾಜು**
ಉಪನ್ಯಾಸಕರು,
ಸರ್ಕಾರಿ ಪ.ಪೂ ಕಾಲೇಜು,
ಹೆರಸನಹಳ್ಳಿ, ಕೆ.ಜಿ.ಕೊಪ್ಪಲು,
ಹುಣಸೂರು ತಾ॥ ಮೈಸೂರುಜಿಲ್ಲೆ

**ರೇಣುಕ. ಎನ್. ಬಸರಿಕಟ್ಟಿ**
ಉಪನ್ಯಾಸಕರು,
ಎಸ್.ಆರ್.ವಿ.ಪಿ ಸ.ಪ.ಪೂ. ಕಾಲೇಜು,
ಕಮಡೊಳ್ಳಿ, ಕುಂದಗೋಳ, ಧಾರವಾಡ

**ಡಾ. ಸಿ. ವೆಂಕಟಪ್ಪ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬಳ್ಳೇನಹಳ್ಳಿ, ಕೆ.ಆರ್.ಪೇಟೆ ತಾ॥

## ಪರಿಶೀಲನಾ ಸಮಿತಿ

**ಎಚ್.ಡಿ. ಲಿಂಗರಾಜು**
ಜಿಲ್ಲಾ ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ರಾಮನಗರ ಜಿಲ್ಲೆ, ರಾಮನಗರ.

**ಡಾ॥ ಸೋ.ಮು. ಭಾಸ್ಕರಾಚಾರ್**
ನಿವೃತ್ತ ಹಿರಿಯ ಉಪನ್ಯಾಸಕರು,
ತುಮಕೂರು.

**ಡಾ॥ ಶಿವರಾಜ ಕುಲಕರ್ಣಿ**
ಪ್ರಾಂಶುಪಾಲರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಚಿಂಚೋಳಿ, ಗುಲ್ಬರ್ಗಾ ಜಿಲ್ಲೆ

# ಪ್ರಸ್ತಾವನೆ

೨೦೧೩–೧೪ನೇ ಸಾಲಿನಿಂದ ಜಾರಿಗೆ ಬಂದಿರುವ ಪ್ರಥಮ ಪಿಯುಸಿ ಕನ್ನಡ ಭಾಷಾ ಪಠ್ಯ ಪುಸ್ತಕ "ಸಾಹಿತ್ಯ ಸಂಚಲನ" ಕ್ಕೆ ಪೂರಕವಾಗಿ, ರಾಷ್ಟ್ರೀಯ ಶಿಕ್ಷಣ ನೀತಿಯಂತೆ ಪ್ರಯೋಗ ಪ್ರಣತಿಯನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳ ಕೈಸೇರುವಂತೆ ಮಾಡಲಾಗಿದೆ.

ಅನೂಹ್ಯ ವೇಗದಿಂದ ಮುನ್ನುಗ್ಗುತ್ತಿರುವ ತಂತ್ರಜ್ಞಾನದ ಪ್ರಭಾವದಿಂದ ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಕೌಶಲ್ಯ ಕಡಿಮೆಯಾಗುತ್ತಿರುವುದು ದುರಂತವೇ ಸರಿ. ಈ ಹಿನ್ನೆಲೆಯಲ್ಲಿ ಬರವಣಿಗೆಯ ಅಭಿರುಚಿಯನ್ನು ರೂಢಿಸಿಕೊಳ್ಳಲು ಪ್ರೇರೇಪಿಸುವಂತಹ ಪ್ರಯತ್ನವೇ ಈ ಪ್ರಯೋಗ ಪ್ರಣತಿ.

ಪ್ರಯೋಗ ಪ್ರಣತಿಯನ್ನು ವಿದ್ಯಾರ್ಥಿಗಳು ತರಗತಿಗಳಿಗೆ ಕಡ್ಡಾಯವಾಗಿ ತರುವಂತೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಉಪನ್ಯಾಸಕ ಮಿತ್ರರು ಕಾರ್ಯೋನ್ಮುಖರಾಗಬೇಕೆಂದು ಕೋರಿದೆ.

ಪಠ್ಯಪುಸ್ತಕದಲ್ಲಿ ಬರುವ ಒಂದು ಮತ್ತು ಎರಡು ಅಂಕಗಳ ಪ್ರಶ್ನೆಗಳಿಗೆ ಸಂಕ್ಷಿಪ್ತ ರೂಪದ ಉತ್ತರಗಳನ್ನು ಈ ಪುಸ್ತಕ ಕೊನೆಯಲ್ಲಿ ನೀಡಲಾಗಿದ್ದು, ಅವುಗಳ ಸಹಾಯದಿಂದ ವಾಕ್ಯಗಳ ರೂಪದಲ್ಲಿ ಉತ್ತರಿಸಲು ಸ್ಥಳಾವಕಾಶ ಕಲ್ಪಿಸಲಾಗಿದೆ.

ಭಾಷಾಭ್ಯಾಸದ ಘಟಕಗಳನ್ನು ಅಭ್ಯಾಸ ಮಾಡಲು ಅವಕಾಶ ಕಲ್ಪಿಸಿದೆ. ಇದರಿಂದ ವಿದ್ಯಾರ್ಥಿಗಳ ಶಬ್ದಸಂಪತ್ತು ಶ್ರೀಮಂತಗೊಳ್ಳಲು ನೆರವಾಗುತ್ತದೆ.

ಗಾದೆ, ಪ್ರಬಂಧ ಮತ್ತು ಪತ್ರಲೇಖನಗಳ ಮಾದರಿಗಳನ್ನು ಗಮನಿಸಿ, ಅವುಗಳ ಆಧಾರದಿಂದ ಸ್ವತಂತ್ರವಾಗಿ ಬರೆಯುವ ಸೃಜನಶೀಲ ಶಕ್ತಿಯನ್ನು ಪಡೆಯುವಲ್ಲಿ ನೆರವಾಗುತ್ತದೆ.

ವಿದ್ಯಾರ್ಥಿಗಳಲ್ಲಿ ಅಡಗಿರುವ ಸೃಜನಶೀಲತೆಯನ್ನು ಪ್ರಕಟಗೊಳಿಸಲು ಪ್ರಯೋಗ ಪುಸ್ತಕದ ಉಪಯುಕ್ತತೆಯ ಅರಿವನ್ನು ಮೂಡಿಸಲು ಉಪನ್ಯಾಸಕ ಮಿತ್ರರು ಶ್ರಮಿಸಬೇಕೆಂದು ಮನವಿ ಮಾಡಿಕೊಳ್ಳಲಾಗಿದೆ.

ಪ್ರಯೋಗ ಪ್ರಣತಿಯ ರಚನೆಗೆ ಸಹಕರಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ನಮ್ಮ ಕೃತಜ್ಞತೆಗಳು.

ಪಠ್ಯದ ಅಕ್ಷರಗಳನ್ನು ತಪ್ಪಿಲ್ಲದಂತೆ ಅಂದವಾಗಿ ಜೋಡಿಸಿಕೊಟ್ಟ ಶ್ರೀ ಡಿ.ಎ.ಭಾಸ್ಕರ್, ಶ್ರೀ ವೆಂಕಟಾದ್ರಿ ಡಿಜಿಟಲ್ಸ್, ಚಿಕ್ಕಬಳ್ಳಾಪುರ, ಹಾಗೂ ಪುಟಗಳನ್ನು ಅಂದವಾಗಿ ವಿನ್ಯಾಸ ಮಾಡಿದ ಸ್ಕಂದ ಕ್ರಿಯೇಶನ್ಸ್, ನ ಶ್ರೀ ನಾಗರಾಜ್ ಇವರಿಗೆ ಪಠ್ಯ ಸಮಿತಿಯ ವಂದನೆಗಳು.

**ಡಾ. ಎಂ. ಎಲ್. ಶಂಕರಲಿಂಗಪ್ಪ**
ಅಧ್ಯಕ್ಷರು
ಪಠ್ಯಪುಸ್ತಕ ಸಮಿತಿ ಪರವಾಗಿ

# ಪರಿವಿಡಿ

## ಕಾವ್ಯ ಭಾಗ


| | | |
|---|---|---|
| ೧. | ದುರ್ಯೋಧನ ವಿಲಾಪ | ೧ |
| ೨. | ವಚನಗಳು | ೩ |
| ೩. | ದೇವನೊಲಿದನ ಕುಲವೇ ಸತ್ಕುಲಂ | ೭ |
| ೪. | ಹಲುಬಿದಳ್ ಕಲ್ಮರಂ ಕರಗುವಂತೆ | ೯ |
| ೫. | ತಲ್ಲಣಿಸದಿರು ಕಂಡ್ಯಾ ತಾಳುಮನವೆ | ೧೧ |
| ೬. | ಸಿಸುಮಕ್ಕಳಿಗೊಲಿದ ಮಾದೇವ | ೧೨ |
| ೭. | ಅಖಂಡ ಕರ್ನಾಟಕ | ೧೫ |
| ೮. | ಎಂದಿಗೆ | ೧೭ |
| ೯. | ಮಗು ಮತ್ತು ಹಣ್ಣುಗಳು | ೧೯ |
| ೧೦. | ನಾ ಬರೀ ಭ್ರೂಣವಲ್ಲ | ೨೧ |
| ೧೧. | ಮತ್ತೆ ಸೂರ್ಯ ಬರುತ್ತಾನೆ | ೨೩ |
| ೧೨. | ಸುನಾಮಿ ಹಾಡು | ೨೪ |
| ೧೩. | ಹೊಲಿಗೆ ಯಂತ್ರದ ಅಮ್ಮಿ | ೨೬ |
| ೧೪. | ದೇವರಿಗೊಂದು ಅರ್ಜಿ | ೨೮ |
| ೧೫. | ಜೀವಕೆ ಇಂಧನ | ೨೯ |


## ಗದ್ಯ ಭಾಗ


| | | |
|---|---|---|
| ೧. | ಗಾಂಧಿ | ೩೧ |
| ೨. | ರಾಗಿಮುದ್ದೆ | ೩೩ |
| ೩. | ಜ್ಯೋತಿಷ್ಯ ಅರ್ಥಪೂರ್ಣವೋ ಅರ್ಥರಹಿತವೋ | ೩೬ |
| ೪. | ಶಾಸ್ತ್ರೀ ಮಾಸ್ತರ ಮತ್ತವರ ಮಕ್ಕಳು | ೩೮ |
| ೫. | ಬುದ್ಧ ಬಿಸಿಲೂರಿನವನು | ೪೦ |
| ೬. | ಮಹಾತ್ಮರ ಗುರು | ೪೨ |
| ೭. | ನಿರಾಕರಣೆ | ೪೪ |
| ೮. | ಕೃಷಿ ಸಂಸ್ಕೃತಿ ಮತ್ತು ಜಾಗತೀಕರಣ | ೪೬ |
| ೯. | ಚತುರನ ಚಾತುರ್ಯ | ೪೮ |

## ನಾಟಕ


ಬೋಳೇಶಂಕರ ೫೦


## ಭಾಷಾಭ್ಯಾಸ


ಪತ್ರಲೇಖನ ೫೪

ಗಾದೆಗಳು ೬೦

ಪ್ರಬಂಧ ರಚನೆ ೬೪

ಬಿಡಿಸಿ ಬರೆಯಿರಿ ೭೧

ಸಮಾನಾರ್ಥಕಗಳು ೭೪

ನಾನಾರ್ಥಗಳು ೭೭

ಅನ್ಯದೇಶ್ಯ ಶಬ್ದಗಳು ೮೦

ತತ್ಸಮ–ತದ್ಭವಗಳು ೮೧

ವಿರುದ್ಧ ಪದಗಳು ೮೪

ದ್ವಿರುಕ್ತಿಗಳು ೮೬

ಜೋಡುಪದಗಳು ೮೭

ಅನುಕರಣವಾಚಿಗಳು ೮೯

ನುಡಿಗಟ್ಟುಗಳು ೯೦

ಪ್ರಶ್ನೆಪತ್ರಿಕೆ ಸ್ವರೂಪ ೯೩

ಮಾದರಿ ಪ್ರಶ್ನೆ ಪತ್ರಿಕೆ ೯೫

# ೧. ದುರ್ಯೋಧನ ವಿಲಾಪ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಕುರುಪತಿ ರಣರಂಗದಲ್ಲಿ ಏನನ್ನು ಮೆಟ್ಟಿ ನಡೆದನು?

೨. ರಣರಂಗದಲ್ಲಿ ಸಾಗುವಾಗ ದುರ್ಯೋಧನ ಯಾರ ನೆರವನ್ನು ಅವಲಂಬಿಸಿದ್ದನು?

೩. ಪಿನಾಕಪಾಣಿ ಎಂದರೆ ಯಾರು?

೪. ಚಕ್ರವ್ಯೂಹವನ್ನು ರಚಿಸಿದವನು ಯಾರು?

೫. ತಂದೆಗೆ ಜಲಾಂಜಲಿಯನ್ನು ಯಾರು ಕೊಡಬೇಕು?

೬. ದಿವ್ಯಜ್ಞಾನಿ ಎಂದು ಯಾರನ್ನು ಕರೆಯಲಾಗಿದೆ?

೭. ಅಂಗಾಧಿಪತಿ ಯಾರು?

೮. ಹರಿಯು ಕರ್ಣನಿಂದ ಬೇಡಿದ್ದೇನು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ರಣರಂಗದಲ್ಲಿ ಬಿದ್ದಿದ್ದ ಅಭಿಮನ್ಯುವಿನ ಕಳೇಬರ ಯಾವ ರೀತಿ ಕಾಣುತ್ತಿತ್ತು?

೨. ದುರ್ಯೋಧನ ತನ್ನ ಮಗನ ಶವವನ್ನು ಕಂಡು ಹೇಗೆ ವ್ಯಥೆಪಡುತ್ತಾನೆ?

೩. ದುಶ್ಯಾಸನನು ಅಣ್ಣನಿಗೆ ತೋರಿದ್ದ ವಿನಯಶೀಲತೆ ಯಾವುದು?

೪. ಕರ್ಣನ ಜನ್ಮ ರಹಸ್ಯವನ್ನು ಯಾರು ಯಾರು ಅರಿತಿದ್ದರು?

೫. ದುರ್ಯೋಧನನು ಕರ್ಣನ ದಾನಗುಣವನ್ನು ಹೇಗೆ ಪ್ರಶಂಸಿದ್ದಾನೆ?

❖❖❖❖❖

# ೨. ವಚನಗಳು–ಅಲ್ಲಮ ಪ್ರಭು

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಅಲ್ಲಮಪ್ರಭುವಿನ ಅಂಕಿತ ಯಾವುದು?

೨. ಕಾಲುಗಳನ್ನು ಯಾವುದಕ್ಕೆ ಹೋಲಿಸಲಾಗಿದೆ?

೩. ದೇಹವೆಂಬುದು ಏನು?

೪. ಕಟ್ಟೋಗರದ ಮೊಟ್ಟೆಯನ್ನು ಎಲ್ಲಿ ಕಟ್ಟಲಾಗಿದೆ?

೫. ಇಟ್ಟ ಕಲ್ಲು ಎಲ್ಲಿ ಸಿಕ್ಕರೆ ಲಿಂಗವೆಂದು ಕೇಳುತ್ತಾನೆ?

೬. ಹಸಿದಾಗ ಏನನ್ನು ಕೊಡಬೇಕೆಂದು ಅಲ್ಲಮ ಹೇಳುತ್ತಾನೆ?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಕಾಲು ಮತ್ತು ದೇಹವನ್ನು ಯಾವುದಕ್ಕೆ ಹೋಲಿಸಲಾಗಿದೆ?

೨. ಯಾರನ್ನು ಕಂಡರೆ ಅಲ್ಲಮ ನಾಚುವೆನೆಂದು ಹೇಳುವನು?

೩. ಅಲ್ಲಮ ಏನನ್ನು ನೀಡುವುದರಿಂದ 'ನಾದೇವ' ಎಂದು ಹೇಳುತ್ತಾನೆ?

## (ಆ)ಘಟ್ಟಿವಾಳಯ್ಯ

**I ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ದಯೆ ಧರ್ಮದ ಮೊನೆ ಯಾವುದಕ್ಕೆ ಇರುವುದಿಲ್ಲ?

೨. ತಪವನ್ನು ಘಟ್ಟಿವಾಳಯ್ಯ ಏನೆಂದು ಕರೆಯುತ್ತಾನೆ?

೩. ನಗೆಗೆ ಈಡಾಗುವುದು ಯಾವುದು?

೪. ಭಾಷೆ ಹೀನರ ಕಂಡಾಗ ಏನಾಯಿತು?

೫. ಘಟ್ಟಿವಾಳಯ್ಯನ ಅಂಕಿತ ಯಾವುದು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಕೈದು, ಕಾಳೋರಗಗಳಿಗೆ ಏನೇನು ಇರುವುದಿಲ್ಲ?

೨. ತಗಹು, ಸೂತಕಗಳು ಯಾವುವು?

೩. ತನುಮನಧನಗಳನ್ನು ಮರೆಯಲು ಏನನ್ನು ತೋರುತ್ತಾರೆ?

## (ಇ) ಅಕ್ಕಮಹಾದೇವಿ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಅಕ್ಕನು ಹೇಳುವ ತೊಡರು ಯಾವುದು?

೨. ಲೋಕದ ಚೇಷ್ಟೆಗೆ ಬೀಜವಾದುದು ಯಾವುದು?

೩. ಭವ ಯಾವಾಗ ಕೆಡುವುದು?

೪. ಸತ್ಯವ ನುಡಿವುದು ಯಾವುದರ ಶೃಂಗಾರವಾಗಬೇಕು?

೫. ಅಕ್ಕನ ವಚನಗಳ ಅಂಕಿತ ಯಾವುದು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ರತ್ನ ಮತ್ತು ಮುತ್ತು ಏನನ್ನು ಸೂಚಿಸುತ್ತವೆ?

೨. ಲೋಕ ಹಾಗೂ ಕರಣಗಳ ಚೇಷ್ಟೆಗೆ ಬೀಜ ಯಾವುದು?

೩. ಕಣ್ಣು ಹಾಗೂ ಕರ್ಣಗಳಿಗೆ ಶೃಂಗಾರ ಯಾವುದು?

❖❖❖❖❖

# ೩. ದೇವನೊಲಿದನ ಕುಲವೇ ಸತ್ಕುಲಂ

**III. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಚೋಳ ದೇಶವು ಯಾರಿಗೆ ನೆಲೆಯಾಗಿತ್ತು?

೨. ಚೋಳ ದೇಶವನ್ನು ಆಳುತ್ತಿದ್ದ ದೊರೆ ಯಾರು?

೩. ಚೆನ್ನಯ್ಯನು ಮಾಡುತ್ತಿದ್ದ ಕಾಯಕ ಯಾವುದು?

೪. ಚೆನ್ನಯ್ಯನು ಹುಲ್ಲನ್ನು ಯಾವುದರ ಮೇಲೆ ಹೇರಿಕೊಂಡು ಬರುತ್ತಿದ್ದನು?

೫. ಶಿವನು ಯಾರ ಜೊತೆ ಊಟ ಮಾಡಿದನು?

೬. ಚೆನ್ನಯ್ಯನನ್ನು ಹುಡುಕಲು ಚೋಳರಾಜನು ಯಾರನ್ನು ಕಳುಹಿಸಿದನು?

೭. ಚೋಳರಾಜನು ಚೆನ್ನಯ್ಯನನ್ನು ಶಿವಾಲಯಕ್ಕೆ ಹೇಗೆ ಕರೆತಂದನು?

೮. ಕೈಲಾಸದಲ್ಲಿ ಚೆನ್ನಯ್ಯನಿಗೆ ಯಾವ ಪದವಿ ಲಭಿಸಿತು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಕಾವೇರಿ ನದಿಯ ಮಹಿಮೆ ಎಂಥಹುದು?

೨. ಚೆನ್ನಯ್ಯನ ಗುಪ್ತಭಕ್ತಿ ಯಾವ ರೀತಿಯದು?

೩. ಶಿವಲಿಂಗವನ್ನು ಯಾವ ಯಾವ ಹೂಗಳಿಂದ ಚೆನ್ನಯ್ಯ ಸಿಂಗರಿಸುತ್ತಿದ್ದನು?

೪. ಚೋಳರಾಜ ಚೆನ್ನಯ್ಯನ ಪಾದಗಳನ್ನು ಹಿಡಿದಾಗ ಅವನ ಪ್ರತಿಕ್ರಿಯೆ ಏನು?

೫. ಶಿವನ ಮೇಲೆ ಚೆನ್ನಯ್ಯನು ಮುನಿಸಿಕೊಳ್ಳಲು ಕಾರಣವೇನು?

೬. ಶಿವನು ಚೆನ್ನಯ್ಯನನ್ನು ಹೇಗೆ ಸಮಾಧಾನ ಪಡಿಸಿದನು?

# ೪. ಹಲುಬಿದಳ್ ಕಲ್ಮರಂ ಕರಗುವಂತೆ

## I. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಸೌಮಿತ್ರಿಯು ಸೀತೆಯನ್ನು ಎಲ್ಲಿಗೆ ಕರೆದುಕೊಂಡು ಹೋದನು?

೨. ರಾಮನ ಆಜ್ಞೆ ಏನು?

೩. ಲಕ್ಷ್ಮಣನ ಮಾತು ಕೇಳಿದ ಸೀತೆ ಭೂಮಿಗೆ ಹೇಗೆ ಬಿದ್ದಳು?

೪. ಕಾಡಿನಲ್ಲಿ ತನಗೆ ಯಾರ ನೆರವುಂಟೆಂದು ಸೀತೆ ಹೇಳುತ್ತಾಳೆ?

೫. ಸೀತೆ ಯಾರಲ್ಲಿ ತಪ್ಪಿಲ್ಲವೆಂದು ಹೇಳುತ್ತಾಳೆ?

೬. ಸೀತೆಯು ಲಕ್ಷ್ಮಣನಿಗೆ ಏನೆಂದು ಹಾರೈಸಿ ಬೀಳ್ಕೊಡುತ್ತಾಳೆ?

೭. ಭೂದೇವಿಯ ಮಗಳು ಯಾರು?

೮. ವಾಲ್ಮೀಕಿ ಏನನ್ನು ಹುಡುಕುತ್ತಾ ವನಕ್ಕೆ ಬಂದನು?

೯. ರಾವಣಾರಿ ಎಂದರೆ ಯಾರು?

೧೦. ಸೀತೆಯನ್ನು ಆಶ್ರಮಕ್ಕೆ ಕರೆತಂದವರು ಯಾರು?

**II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಸೀತೆ ಪ್ರವೇಶಿಸಿದ ಕಾಡು ಹೇಗಿತ್ತು?

೨. ಮೂರ್ಛಿತಳಾದ ಸೀತೆಯನ್ನು ಲಕ್ಷ್ಮಣ ಹೇಗೆ ಉಪಚರಿಸಿದನು?

೪. ಸೀತೆಯು ಸೌಮಿತ್ರಿಯನ್ನು ಹಿಂತಿರುಗಿ ಹೋಗೆಂದು ಏಕೆ ಹೇಳಿದಳು?

೫. ಸೀತೆಯನ್ನು ಕಾಡಿನ ಪ್ರಾಣಿಗಳು ಹೇಗೆ ಉಪಚರಿಸಿದವು?

# ೫. ತಲ್ಲಣಿಸದಿರು ಕಂಡ್ಯ ತಾಳು ಮನವೇ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ವೃಕ್ಷವು ಎಲ್ಲಿ ಹುಟ್ಟಿತ್ತು?

೨. ಮೃಗಪಕ್ಷಿಗಳು ಎಲ್ಲಿ ಆಡುತ್ತಿದ್ದವು?

೩. ಯಾವ ತೆರದಿ ಸ್ವಾಮಿ ನಮ್ಮನ್ನು ಬಿಡದೆ ರಕ್ಷಿಸುವನು?

೪. ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ?

೫. ಕಪ್ಪೆಗಳು ಎಲ್ಲಿ ಹುಟ್ಟಿ ಕೂಗುತ್ತವೆ?

**II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ವೃಕ್ಷವನ್ನು ಆದಿಕೇಶವ ಹೇಗೆ ಸಲಹುತ್ತಾನೆ?

೨. ಮೃಗಪಕ್ಷಿಗಳನ್ನು ಸ್ವಾಮಿಯು ಹೇಗೆ ರಕ್ಷಿಸುತ್ತಾನೆ?

# ೬. ಸಿಸು ಮಕ್ಕಳಿಗೊಲಿದ ಮಾದೇವ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಮಾದೇವ ಎಲ್ಲಿ ಒರಗಿದ್ದಾನೆ?

೨. ಯಾರ ಮಕ್ಕಳನ್ನು ಮಾದೇವ ದತ್ತುವಾಗಿ ಪಡೆದನು?

೩. ಸಿಸುಮಕ್ಕಳು ಹೂ ತರಲು ಎಲ್ಲಿಗೆ ಹೋಗಿದ್ದರು?

೪. ಮಾದೇವ ಮಕ್ಕಳ ಸತ್ಯ ನೋಡಲು ಏನು ಮಾಡಬೇಕೆನ್ನುತ್ತಾನೆ?

೫. ಮಳೆಯನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ?

೬. ವಾಯುದೇವನನ್ನು ಎಂತಹ ಸುಂಟರಗಾಳಿ ಕಳುಹಿಸು ಎಂದು ಮಾದೇವ ಕೇಳುತ್ತಾನೆ?

೭. ಕಾರೆಂಬೊ ಕತ್ತಲಲ್ಲಿ ಎಂತಹ ಮಳೆ ಬಂತು?

೮. ಗಂಗೆ ಸುರಿಯುವ ರಭಸಕ್ಕೆ ಏನೇನು ಒಂದಾದವು?

೯. ಗಂಗಮ್ಮ ಏನನ್ನು ಹೊತ್ತುಕೊಂಡು ಹೋದಳು?

೧೦. ನೀರಿನ ಸುಳಿಗೆ ಸಿಲುಕಿದ ಮಾದೇವ ಹೇಗೆ ತಿರುಗಿದನು?

೧೧. ಮಾದೇವ ಯಾವುದಕ್ಕೆ ಒಲಿದನು?

೧೨. ನಂಬಿದವರ ಮನದಲ್ಲಿ ಮಾದೇವ ಹೇಗಿರುತ್ತಾನೆ?

**II. ಎರಡು ವಾಕ್ಯಗಳಲ್ಲಿ ಉತ್ತರಿಸಿ:**

೧. ಮಾದೇವನ ಶಿಶುಮಕ್ಕಳ ಹೆಸರೇನು?

೨. ಸಿಡಿಲು ಗುಡುಗುಗಳನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ?

೩. ಮಳೆಯನ್ನು ನೋಡಿ ಕನ್ನಯ್ಯ ತನ್ನೊಳಗೆ ಏನೆಂದು ಕೊಳ್ಳುತ್ತಾನೆ?

೪. ಶಿಶು ಮಕ್ಕಳು ಏಕೆ ಬಾಯಿಬಾಯಿ ಬಡಿದುಕೊಳ್ಳುತ್ತಾರೆ?

೫. ಬಲಿಯ ಕಲ್ಲನ್ನು ಕನ್ನಯ್ಯ ಬಲವಾಗಿ ಹಿಡಿದು ಕೊಳ್ಳುವುದು ಏಕೆ?

೬. ಶಿಶುಮಕ್ಕಳು ನಾವು ಸತ್ತರೂ ಚಿಂತಿಲ್ಲ ಎನ್ನಲು ಕಾರಣವೇನು?

೭. ಮಾದೇವ ತನ್ನ ಶಿಶುಮಕ್ಕಳಿಗೆ ಏನೇನು ನೀಡಿ ಸಲಹಿದನು?

೮. ಶಿಶುಮಕ್ಕಳ ಪ್ರೇಮಕ್ಕೆ ಮಾದಪ್ಪ ಹೇಗೆ ಬಂದನು?

❖❖❖❖❖

# ೭. ಅಖಂಡ ಕರ್ನಾಟಕ!

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಅಖಂಡ ಕರ್ನಾಟಕವನ್ನು ಹರಸುತ್ತಿರುವವರು ಯಾರು?

೩. ಸಿರಿಗನ್ನಡವನ್ನು ಯಾವುದಕ್ಕೆ ಹೋಲಿಸಲಾಗಿದೆ?

೪. ಅಖಂಡ ಕರ್ನಾಟಕದ ಚಕ್ರವರ್ತಿ ಯಾರು?

೫. ಅಖಂಡ ಕರ್ನಾಟಕದ ಮುಖ್ಯಮಂತ್ರಿ ಯಾರು?

೬. ಸರಸ್ವತಿಯು ಯಾವ ಸಂಸ್ಕೃತಿಯನ್ನು ಮೆರೆಯಲು ಕರ್ನಾಟಕವನ್ನು ರಚಿಸಿದ್ದಾಳೆ?

೭. ಕರ್ನಾಟಕವು ಯಾರ ಹೃದಯಗಳಲ್ಲಿ ಹೊತ್ತಿರುವ ದೀಪವಾಗಿದೆ?

೮. ಚಲದ ಚಂಡಿ ಯಾರು?

**II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಅಖಂಡ ಕರ್ನಾಟಕ ಬೂಟಾಟದ ರಾಜಕೀಯ ನಾಟಕವಲ್ಲವೇಕೆ?

೨. ಸರಸ್ವತಿಯ ಸಚಿವ ಮಂಡಲದ ಸದಸ್ಯರು ಯಾರು?

೩. ಪರಮಾತ್ಮನ ಚರಣದೀಪ್ತಿ ಎಲ್ಲಿ ಮತ್ತು ಹೇಗೆ ಉರಿಯಬೇಕೆಂದು ಕವಿ ಹೇಳುತ್ತಾರೆ?

೪. ಮೆಳ್ಳೆಗಣ್ಣನಿಗೆ ಕವಿ ಕೇಳುವ ಪ್ರಶ್ನೆಗಳು ಯಾವುವು?

❖❖❖❖❖

# ೮. ಎಂದಿಗೆ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಹುಟ್ಟಿನೊಂದಿಗೆ ಅಂಟಿ ಬಂದ ಯಾವುದನ್ನು ಕಳೆಯಬೇಕು?

೨. ದವಡೆ ಏಕೆ ದಣಿದಿದೆ?

೩. ನಾಡು ಯಾವುದಕ್ಕೆ ತಾಳ ಹೊಡೆದಿದೆ?

೪. ಕಡಲನ್ನು ಕಡೆದಾಗ ಏನು ಬಂತು?

೫. ನಾಡಿಗೆ ಯಾರ ಕಾಟ ಕೊನೆಗೊಂಡಿದೆ?

೬. ಕ್ಷಾತ್ರವಧೆ ಮಾಡಿದವನು ಯಾರು?

೭. ಇರುಳ ಬಸಿರು ಬಗೆದು ಬರಬೇಕಾಗಿರುವುದು ಯಾವುದು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಚಿತ್ತದಾಸ್ಯ ಕಳೆಯಬೇಕಾಗಿರುವುದು ಯಾರು ಯಾರಿಗೆ?

೨. ನಾಡ ಮಂದಿಗೆ ಯಾವುದರ ಬಲ ಹಾಗೂ ಮಹಿಮೆಯಿಂದ ಬಿಡುಗಡೆಯಾಗಿದೆ?

೩. ನಾಡಿನ ಬಿಡುಗಡೆಯಲ್ಲಿ ಯಾವುದಕ್ಕೆ ಅಡೆತಡೆಗಳು ಇಲ್ಲವಾಗಿವೆ?

೪. ನಾಡಿನ ಹೊರಗಿನ ಮತ್ತು ಒಳಗಿನ ಕಳ್ಳರು ಯಾರು?

೫. ರಾಕ್ಷಸಗಣ ಹತ್ಯೆಗೆ ಜನತೆ ಹೇಗೆ ಹೆಜ್ಜೆ ಇಡಬೇಕು?

❖❖❖❖❖

# ೯. ಮಗು ಮತ್ತು ಹಣ್ಣುಗಳು

## I. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಮಗು ಕಣ್ಣನ್ನು ಎಲ್ಲಿ ಅರಳಿಸುತ್ತದೆ?

೨. ತಿರುವಿನಲ್ಲಿ ಅವತರಿಸುವ ವಾಹನ ಯಾವುದು?

೩. ಮಗುವು ಯಾವುದರ ಹಾಗೆ ಬಾಗಬೇಕು?

೪. ಯಾವ ಹಣ್ಣಿನಂತೆ ಮಗು ಕೊಬ್ಬಬಾರದು?

೫. ಅನ್ಯರ ಕಣ್ಣಿಗೆ ಯಾವ ಹಣ್ಣಿನಂತೆ ಮಗು ಅಪರೂಪವಾಗಬೇಕು?

೬. ಆಯುಷ್ಯದ ಚಪ್ಪರಕ್ಕೆ ಮಗು ಹೇಗೆ ಹಬ್ಬಿಕೊಳ್ಳಬೇಕು?

೭. ಬೆಲೆಯ ರಾಕೆಟ್ಟು ಯಾನದಲ್ಲಿ ಹೊರಟ ಹಣ್ಣು ಯಾವುದು?

೮. ಎಲ್ಲರಿಗೂ ದಕ್ಕುವ ಹಣ್ಣು ಯಾವುದು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಮಗು ಬದುಕಿನಲ್ಲಿ ಯಾವ ಯಾವ ತೊಂದರೆಗಳಿಗೆ ಒಳಗಾಗಬಾರದು?

೨. ಮಗು ಹಣ್ಣಿನಂಗಡಿಯಂತಾಗಬೇಕಾದುದು ಎಲ್ಲಿ?

೩. ಮಗುವಿನಲ್ಲಿ ಸಮನಿಸಬೇಕಾದ ಗುಣಗಳು ಯಾವುವು?

೪. ಅರಳಿಸಿದ ದಾಳಿಂಬೆ ಯಾವ ರೀತಿ ಕಾಣುತ್ತದೆ?

❖❖❖❖❖

# ೧೦. ನಾ ಬರೀ ಭ್ರೂಣವಲ್ಲ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಅವ್ವನ ದೇಹದ ಮುಗುಳು ಯಾರು?

೨. ಭ್ರೂಣಾವಸ್ಥೆಯಲ್ಲಿರುವ ಮಗುವಿಗೆ ವಿಷವಾಗಿರುವುದು ಯಾವುದು?

೩. ಭ್ರೂಣಾವಸ್ಥೆಯ ಮಗುವನ್ನು ಬೆನ್ನಟ್ಟಿರುವುದು ಯಾವುದು?

೪. ಒಡಲೊಳಗಿನ ಮಗು ತನ್ನ ರಕ್ತವನ್ನು ಏನೆಂದು ಭಾವಿಸುತ್ತದೆ?

೫. ತನ್ನನ್ನು ಉಳಿಸಿದರೆ ತಾಯಿಗೆ ಏನು ತರುವೆನೆಂದು ಮಗುವು ಹೇಳುತ್ತದೆ?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಹೊಟ್ಟೆಯಲ್ಲಿರುವ ಮಗುವು ತನ್ನ ಉಸಿರಿಗೆ ಯಾವುದು ಪಾಶವಾಗಿದೆಯೆಂದು ಭಾವಿಸುತ್ತದೆ?

೨. ತಾನು ಬದುಕಿನಲ್ಲಿ ಇನ್ನೂ ಕಾಣಬೇಕಾಗಿರುವುದು ಏನೆಂದು ಒಡಲೊಳಗಿನ ಮಗುವು ಹೇಳುತ್ತದೆ?

೩. ಭ್ರೂಣಾವಸ್ಥೆಯ ಮಗುವು ಏಕೆ ಗಾಬರಿಗೊಂಡಿದೆ?

೪. ತನ್ನನ್ನು ಏಕೆ ಕಿತ್ತುಕೊಳ್ಳಬಾರದೆಂದು ಹೊಟ್ಟೆಯೊಳಗಿನ ಮಗುವು ಹೇಳುತ್ತಿದೆ?

೫. ಹೊಟ್ಟೆಯೊಳಗಿನ ಮಗುವು ಯಾವ ವರವನ್ನು ಬೇಡುತ್ತಿದೆ?

❖❖❖❖❖

# ೧೧. ಮತ್ತೆ ಸೂರ್ಯ ಬರುತ್ತಾನೆ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಮಲೆಯ ಮಾಲೆ ಯಾವುದು?

೨. ಶ್ರೀಗಂಧ ತರುಗಳು ಏನಾದವು?

೩. ಅಣುಬಾಂಬುಗಳಿಗೆ ನೆಲ ಏನಾಗಿದೆ?

೪. ನಖಗಳು ಏನನ್ನು ಕಬಳಿಸಲು ಬಂದಿವೆ?

೫. ಕರುಳ ಬಳ್ಳಿಗೆ ತೊಡರಿದ ಹುಳು ಯಾವುದು?

**II ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಚಿತಾಭಸ್ಮವಾದ ತರು ಯಾವುದು ಮತ್ತು ಎಲ್ಲಿ?

೨. ಅಮಾಯಕರಿಗೆ ಕವಿ ನೀಡುವ ಅಶ್ವಾಸನೆ ಯಾವುದು?

೩. ಜನರು ತತ್ತರಿಸಿರುವುದು ಯಾವುದಕ್ಕೆ?

೪. ಹಕ್ಕಿಗಳು ತಮ್ಮ ಕಂಠಗಳಿಂದ ಏನೇನನ್ನು ಮಾರ್ದನಿಸುತ್ತಿವೆ?

❖❖❖❖❖

## ೧೨. ಸುನಾಮಿಯ ಹಾಡು

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಭೂಮಿಯೊಳಗಿನ ಯಾವ ತೆರೆ ಸರಿಯುತ್ತದೆ?

೨. ಜಲದ ಕಣ್ಣು ತೆರೆದಾಗ ಕುಸಿಯುವುದು ಯಾವುದು?

೩. ಜಗಪ್ರಳಯ ಯಾವಾಗ ಸಂಭವಿಸುತ್ತದೆ?

೪. ಮಾಯವಾಗಿರುವ ದ್ವೀಪ ಯಾವುದು?

೫. ಸಾಕ್ಷಿ ಇಲ್ಲದಂತೆ ಹಾರಿಹೋಗುತ್ತಿರುವುದು ಯಾವುದು?

೬. ನಕಾಶೆ ಹುಡುಕುತ್ತಿರುವವರು ಯಾರು?

**II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಕವಿತೆಯಲ್ಲಿ ಜಗಪ್ರಳಯವನ್ನು ಹೇಗೆ ಕಲ್ಪಿಸಲಾಗಿದೆ?

೨. ಅಬ್ಬರದ ಅಲೆಯೆದುರು ದನಿ ಕಳೆದುಕೊಂಡವುಗಳು ಯಾವುವು?

೩. ಭೂಮಿ ಕಂಪಿಸಿದಾಗ ಏನಾಯಿತು?

೪. ಕಾಗದದ ದೋಣಿಗಳಾಗಿ ತೇಲುತ್ತಿರುವುವು ಯಾವುವು?

೫. ಮಂಗಳ, ಶುಕ್ರ ಗ್ರಹಗಳನ್ನು ಯಾಕೆ ಹುಡುಕಬೇಕು?

# ೧೩. ಹೊಲಿಗೆ ಯಂತ್ರದ ಅಮ್ಮಿ.

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಅಮ್ಮಿ ಏನನ್ನು ಪಾಲು ಮಾಡಿದಂತೆ ಬಟ್ಟೆ ಕತ್ತರಿಸುತ್ತಾಳೆ?

೨. ಚಕ್ರ ತಿರುಗಿಸಿದಂತೆ ಉರುಳುವುದು ಯಾವುದು?

೩. ಅಮ್ಮಿ ಯಾವಾಗಲೂ ಏನನ್ನು ಧರಿಸುವಳು?

೪. ಅಮ್ಮಿ ಯಾವುದನ್ನು ಕಡಿದು ಹಾಕಲೆಂದು ಕತ್ತರಿ ಹಿಡಿದಿದ್ದಾಳೆ?

೫. ಅಮ್ಮಿ ಜಗತ್ತಿಗೆ ಎಂತಹ ಬಟ್ಟೆಯನ್ನು ತೊಡಿಸುವಳು?

೬. ಮಗುವಿನಂತೆ ಯಾರನ್ನು ಸಾಕಿದಳು?

೭. ಹೊಲಿಗೆ ಯಂತ್ರದ ಜೊತೆಗೆ ಅಮ್ಮಿ ಕಳೆದ ಕಾಲವೆಷ್ಟು?

**II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಕತ್ತರಿ ಮತ್ತು ಸೂಜಿಗಳ ಕೆಲಸ ಯಾವುದು?

೨. ಅಮ್ಮಿಯನ್ನು ಸೃಷ್ಟಿಕರ್ತೆಯೆಂದು ಏಕೆ ಕರೆಯಲಾಗಿದೆ?

೩. ಅಮ್ಮಿಯ ಬದುಕಿನಲ್ಲಿ ನಿರ್ಜೀವ ಬಟ್ಟೆಗೆ ಪ್ರವೇಶ ಹೇಗಾಯಿತು?

೪. ದಿಕ್ಕು ದೆಸೆಯಿಲ್ಲದೆ ಅಲೆಯುತ್ತಿರುವುವು ಯಾವುವು?

೫. ಹಾಸಿಗೆಯನ್ನು ಹೊಲಿದು ಕೊಡುವಂತೆ ಅಮ್ಮಿಯನ್ನು ಕೇಳಲು ಕಾರಣವೇನು?

೬. ಅಮ್ಮಿಯ ಪಾಲಿಗೆ ನಮಾಜ್ ಮತ್ತು ಈದ್ ಎಂದರೆ ಯಾವುವು?

# ೧೪. ದೇವರಿಗೊಂದು ಅರ್ಜಿ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ತನ್ನನ್ನು ಕ್ಷಮಿಸುವಂತೆ ಕವಿ ಯಾರಲ್ಲಿ ಕೇಳುತ್ತಾನೆ?

೨. ಸಮಾಧಿಗಳು ಯಾರನ್ನು ಬಚ್ಚಿಟ್ಟುಕೊಂಡಿವೆ?

೩. ಬೊಗಸೆಯಲ್ಲಿ ಯಾರನ್ನು ಬಂಧಿಸಲು ಕವಿ ಬಯಸಿದ್ದಾನೆ?

೪. ಕವಿಯ ಗುಂಡಿಗೆಯನ್ನು ಹಿಂಡುತ್ತಿರುವುದು ಯಾವುದು?

೫. ಕವಿಯ ಬೆನ್ನನ್ನು ಮುಳ್ಳುಗಳಾಗಿ ಚುಚ್ಚುತ್ತಿರುವುದೇನು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಧರೆಯ ಮೇಲಿನ ನಡಿಗೆ ಹಾಗೂ ಕರೆಯುವ ಧ್ವನಿ ಕವಿಗೆ ಹೇಗೆ ಭಾಸವಾಗುತ್ತಿದೆ?

೨. ನಗುವ ಚಂದಿರ ಏಕೆ ಕೈಗಂಟಿಕೊಳ್ಳುತ್ತಿದ್ದಾನೆ?

೩. ದಿಕ್ಕು ಬಂದ ಕಡೆಗೆ ನಡೆದ ಕವಿಗೆ ಆದ ಅನುಭವವೇನು?

೪. ಕವಿಯನ್ನು ಚುಚ್ಚುತ್ತಿರುವುದು ಯಾವುದು? ಏಕೆ?

❖❖❖❖❖

## ೧೫. ಜೀವಕೆ– ಇಂಧನ

**I. ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

೧. ಜೀವ ಎಲ್ಲಿ ಅರಳಿದೆ?

೨. ಜೀವದ ಸೆಲೆಗಳನ್ನು ಸುಡುತಿರುವುದು ಯಾವುದು?

೩. ಭೂಮಿಯನ್ನು ಯಾರು ಮಾರಿಕೊಂಡರು?

೪. ಈ ಭೂಮಿಯನ್ನು ಹೇಗೆ ಕಾಯಬೇಕು?

೫. ಜೀವ ಉಳಿಯುವ ದಾರಿ ಯಾವುದು?

೬. ಎಂದೂ ಕರಗದ ಮೂಲಧನ ಯಾವುದು?

**II, ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಒಡಲೊಳಗೆ ಏನೇನು ಸೇರಿಕೊಂಡಿವೆ?

೨. ಉಳ್ಳವರ ಆಶೆಯ ಪರಿಣಾಮಗಳೇನು?

೩. ಧನದಾಹದಿಂದ ಉಂಟಾದ ಪರಿಣಾಮಗಳೇನು?

೪. ಭೂಮಿ ಮತ್ತು ಜೀವವನ್ನು ಉಳಿಸುವ ದಾರಿ ಯಾವುದು?

# ೧. ಗಾಂಧಿ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ವೈದ್ಯಾಧಿಕಾರಿಯ ಜ್ಞಾಪಕಕ್ಕೆ ಬಂದದ್ದು ಏನು?

೨. ವೈದ್ಯಾಧಿಕಾರಿ ಇಲ್ಲಿಯವರೆಗೆ ಯಾವ ರೀತಿಯ ನ್ಯಾಯವನ್ನು ಕಂಡಿರಲಿಲ್ಲ?

೩. ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರೇನು?

೪. ಮೊಮ್ಮಗನ ಅಗಲವಾದ ಕಿವಿಗಳ ಕಂಡ ಕರಿಸಿದ್ದೇಗೌಡ ಯಾರ ಮನೆಗೆ ಹೋದನು?

೫. ಹುಡುಗನಿಗೆ ಮಹಾತ್ಮ ಗಾಂಧಿ ಎಂಬ ಹೆಸರನ್ನು ಇಟ್ಟವರು ಯಾರು?

೬. ಗಾಂಧಿಯನ್ನು ಹೆಚ್ಚಿನ ಪರೀಕ್ಷೆಗಳಿಗೆ ಯಾವ ಆಸ್ಪತ್ರೆಗೆ ಸೇರಿಸಬೇಕೆಂದು ವೈದ್ಯಾಧಿಕಾರಿ ಸೂಚಿಸಿದರು?

೭. ಹಲಸಿನ ಮರ ಮಾರಿದ್ದರಿಂದ ಕರಿಸಿದ್ದೇಗೌಡನಿಗೆ ಸಿಕ್ಕ ಹಣವೆಷ್ಟು?

**II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ವೈದ್ಯಾಧಿಕಾರಿಗೆ ಹುಡುಗ ಹೇಗೆ ಕಂಡನು?

೨. ವೈದ್ಯಾಧಿಕಾರಿ ಹುಡುಗನ್ನು ನೋಡಿ ಏನೆಂದು ಕುಚೇಷ್ಟೆ ಮಾಡಿದ?

೩. ಹುಡುಗನ ಯಾವ ಮಾತಿಗೆ ವೈದ್ಯಾಧಿಕಾರಿ ಬೆಪ್ಪಾಗಿ ಹೋದ?

೪. ಗಾಂಧಿಯನ್ನು ಪರೀಕ್ಷೆ ಮಾಡಿದ ವೈದ್ಯರು ನಿಂಗಮ್ಮನಿಗೆ ಹೇಳಿದ ಮಾತುಗಳೇನು?

೫. ನಿಂಗಮ್ಮನ ಗಂಡ ಪ್ರಾಣ ಕಳೆದುಕೊಂಡದ್ದು ಹೇಗೆ?

೬. ಗಾಂಧಿ ಎಂಬ ಹುಡುಗನ ಕೊನೆಯ ಆಸೆ ಯಾವುದು?

೭. ಊರಿಗೆ ಬಂದ ಕರಿಸಿದ್ದೇಗೌಡ ಏನನ್ನು ಗಿರವಿ ಇಡಲು ಪ್ರಯತ್ನಿಸಿದ?

❖❖❖❖❖

## ೨. ರಾಗಿ ಮುದ್ದೆ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಗ್ರಾಮದ ಅಧಿದೇವತೆ ಯಾರು?

೨. ಕಣ್ಣುಗಳಲ್ಲಿ ಯಾವುದರ ಸಾಲುಚಿತ್ರಗಳು ಮೂಡಿಕೊಂಡವು?

೩. ಹೋಟೆಲ್ಲಿನಲ್ಲಿ ಕರಿಯ ಏನು ಕೆಲಸ ಮಾಡುತ್ತಿದ್ದ?

೪. ಊರಿನ ನೀರು ಎಲ್ಲಿ ನೆಲೆ ನಿಂತಿತ್ತು?

೫. ನೀರಿಗಾಗಿ ಕರಿಯ ಏನನ್ನು ತರುತ್ತಿದ್ದ?

೬. ಬಡಮಕ್ಕಳ ಪಾಲಿಗೆ ಚಾಕಲೇಟ್ ಯಾವುದು?

೭. ರಾಗಿಗೆ ಎಷ್ಟು ಸಾವಿರ ವರ್ಷಗಳ ಇತಿಹಾಸವಿದೆ?

೮. ರಾಗಿಯಲ್ಲಿನ ಸ್ವಲ್ಪ ಸ್ವಲ್ಪವೇ ಬಿಡುಗಡೆಯಾಗುವ ಅಂಶ ಯಾವುದು?

೯. ಅಕ್ಕಿ, ಗೋಧಿಗೆ ಹೋಲಿಸಿದರೆ ರಾಗಿ ಎಷ್ಟು ಪಟ್ಟು ಹೆಚ್ಚು ಪೌಷ್ಟಿಕವಾಗಿದೆ?

೧೦. ಡಾ. ಸಿ. ಹೆಚ್. ಲಕ್ಷ್ಮಣಯ್ಯನವರು ತಮ್ಮ ಪತ್ನಿಯೊಂದಿಗೆ ಹೇಳಿಕೊಂಡ ಕೊನೆಯ ಆಸೆ ಯಾವುದು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಲೇಖಕರು ಹಾಗೂ ಅವರ ಅಣ್ಣನ ನಾಲಗೆಯ ಮೇಲೆ ನೀರೂರಲು ಕಾರಣವೇನು?

೨. ನಮ್ಮ ಯಾವ ಜಿಲ್ಲೆಗಳು ರಾಗಿಯ ಕಣಜಗಳಾಗಿವೆ?

೩. ರಾಗಿ ಬೀಸುವ ಕಲ್ಲನ್ನು ಕುರಿತು ಜನಪದ ಹೆಣ್ಣುಮಗಳ ಪ್ರಾರ್ಥನೆ ಯಾವುದು?

೪. ಮುದ್ದೆ ಮಾಡಲು ಬೇಕಾದ ಕೌಶಲ್ಯವೇನು?

೫. ಲೇಖಕರ ಪ್ರಕಾರ ದುಡಿವ ಜನಕ್ಕೆ ಯಾವ ರೀತಿಯ ಮುದ್ದೆ ಇರಬೇಕು?

೬. ಯಾವ ಕಾರಣದಿಂದ ಕ್ಯಾಂಟೀನ್ ರಸಮಯ ಸನ್ನಿವೇಶಗಳ ರಂಗಸ್ಥಳವಾಗಿತ್ತು?

೭. ರಾಗಿಯಲ್ಲಿ ಯಾವ ರೋಗಗಳನ್ನು ತಡೆಯಬಲ್ಲ ಗುಣವಿದೆ?

೮. ಮುದ್ದೆಯ ಕುರಿತು ಕೋಮಲಾಂಗಿಯರಿಗೆ ಇರುವ ಹೆದರಿಕೆ ಯಾವುದು?

❖❖❖❖❖

# ೩. ಜ್ಯೋತಿಷ್ಯ–ಅರ್ಥಪೂರ್ಣವೋ ಅರ್ಥ ರಹಿತವೋ?

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಜ್ಯೋತಿಷ್ಯದ ಉಗಮವು ಎಲ್ಲಿ ಕಂಡು ಬರುತ್ತದೆ?

೨. ಯಾವುದು ಹಾಸ್ಯಾಸ್ಪದ ಸಂಗತಿ?

೩. ಜಾತಕಗಳನ್ನು ಹೇಗೆ ಬರೆಯಲಾಗುತ್ತದೆ?

೪. ಜ್ಯೋತಿಷಿಗಳ ಭವಿಷ್ಯವಾಣಿ ಓದಲು ಹೇಗಿರುತ್ತದೆ?

೫. ಜನ ನಿರಾಶೆ, ಸಮಸ್ಯೆಗಳಲ್ಲಿದ್ದಾಗ ಯಾವುದರ ಮೊರೆ ಹೋಗುತ್ತಾರೆ?

೬. ಜ್ಯೋತಿಷ್ಯ ಮುಗ್ಧ ಜನರನ್ನು ಹೇಗೆ ಶೋಷಿಸುತ್ತದೆ?

೭. ಮೂಢನಂಬಿಕೆಗಳಿಂದ ಉಂಟಾಗುವ ಅಪಾಯ ಎಂಥದ್ದು?

೮. ವಾಯು, ಜಲ ಮಾಲಿನ್ಯಕ್ಕಿಂತ ಯಾವುದು ಹೆಚ್ಚು ಅಪಾಯಕಾರಿಯಾಗಿರುತ್ತದೆ?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪಗೊಳ್ಳುತ್ತವೆ?

೨. ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು? ಅವುಗಳು ಯಾವುವು?

೩. ರಾಹುಕಾಲ, ಗುಳಿಕಕಾಲ, ಯಮಗಂಡಕಾಲಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?

೪. ಬುದ್ಧನು "ವಿನಯ ಪೀಟಿಕಾ" ಗ್ರಂಥದಲ್ಲಿ ಯಾರಿಂದ ದೂರವಿರಬೇಕೆಂದು ಎಚ್ಚರಿಸಿದ್ದಾನೆ?

❖❖❖❖❖

# ೪. ಶಾಸ್ತ್ರಿ ಮಾಸ್ತರ ಮತ್ತವರ ಮಕ್ಕಳು

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಸೇಂಗಾ ಮಾರುವವನ ದಿನದ ಸಂಪಾದನೆ ಎಷ್ಟು?

೨. ಗಾಡಿ ಶಹಾಬಾದಿಗೆ ಬಂದಾಗ ಸಮಯ ಎಷ್ಟಾಗಿತ್ತು?

೩. ಶಾಸ್ತ್ರಿಮಾಸ್ತರರ ಹೆಂಡತಿ ಹೆಸರೇನು?

೪. ಮಾಸ್ತರರ ಅವಳಿ ಮಕ್ಕಳ ಸಾವು ಹೇಗಾಯಿತು?

೫. ಮಾಸ್ತರರಿಗೆ ಇನ್ನೂ ಎಷ್ಟು ವರ್ಷ ಸೇವೆ ಇತ್ತು?

೬. ಮಾಸ್ತರರು ಮನೆಯ ಮುಂದೆ ಬರೆಸಿ ಹಾಕಿದ ಬೋರ್ಡು ಯಾವುದು?

೭. ನಿರೂಪಕರನ್ನು ರೂಪಿಸಿದ ಶಿಲ್ಪಿ ಯಾರು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ತಾವು ಓದಿದ ಹೈಸ್ಕೂಲ್ ನೆನಪು ಬಂದಾಗ ನಿರೂಪಕರಿಗೆ ಏನನಿಸಿತು?

೨. ನಿರೂಪಕರ ಓರೆಕೋರೆಗಳನ್ನು ತಿದ್ದಿದ ಗುರುಗಳು ಯಾರ್‍ಯಾರು?

೩. ನಿರೂಪಕರ ತಂದೆ ಅವರನ್ನು ಯಾರು ಯಾರಿಂದ ಅಗಲಿಸಿ ಊರಿಗೆ ಕರೆತಂದರು?

೪. ಪ್ರೈಮರಿ ಶಾಲೆ ಸೇರಿದಾಗ ನಿರೂಪಕರನ್ನು ಅಂಬವ್ವ ಹೇಗೆ ನೋಡಿಕೊಳ್ಳುತ್ತಿದ್ದರು?

೫. ಮಾಸ್ತರರ ಮಕ್ಕಳ ಶವಯಾತ್ರೆಗೆ ಜನ ಹೇಗೆ ಬಂದಿತ್ತು?

೬. ಅವಳಿ ಮಕ್ಕಳ ಸಾವಿನ ನಂತರ ಮಾಸ್ತರ ಮತ್ತು ಅಂಬವ್ವನ ಸ್ಥಿತಿ ಏನಾಯಿತು?

೭. ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದ್ದರು?

❖❖❖❖❖

# ೫. ಬುದ್ಧ ಬಿಸಿಲೂರಿನವನು

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಗೌತಮ ಜನಿಸಿದ್ದು ಎಲ್ಲಿ?

೨. ನೇಪಾಳದ ವಿಮಾನ ಹೇಗಿತ್ತು?

೩. ಬುದ್ಧನಿಗೆ ಜ್ಞಾನೋದಯವಾದ ದಿನ ಯಾವುದು?

೪. ಮಾಯಾದೇವಿ ದೇವಾಲಯ ಹೇಗಿತ್ತು?

೫. ಅಶೋಕನ ಸ್ತಂಭ ಎಲ್ಲಿದೆ?

೬. ಯಾರ ಪ್ರವಾಸಾನುಭವದಲ್ಲಿ ಲುಂಬಿನಿಯ ಬಗೆಗೆ ವಿವರಗಳಿವೆ?

೭. ಕಪಿಲವಸ್ತುವಿನ ಇಂದಿನ ಹೆಸರೇನು?

೮. ಅರಮನೆಯ ಗಾರ್ಡು ಲೇಖಕರನ್ನು ಏನೆಂದು ಕೇಳಿದನು?

೯. ಲೇಖಕರ ಮನಸ್ಸಿನಲ್ಲಿ ಗಾಢವಾಗಿ ಅಚ್ಚೊತ್ತಿದ್ದು ಯಾವುದು?

**II. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಮಹಾನ್ ವ್ಯಕ್ತಿಗಳ ದರ್ಶನ ಅರ್ಥವಾಗುವುದು ಹೇಗೆ?

೨. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?

೩. ಗೌತಮನ ಮನೋಲೋಕವನ್ನು ನಿರಂತರವಾಗಿ ದಹಿಸಿದ ಪ್ರಶ್ನೆಗಳು ಯಾವುವು?

❖❖❖❖❖

# ೬. ಮಹಾತ್ಮರ ಗುರು

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಶೋಷಿತ ಜನಾಂಗದವರ ಬಾಳಿನಲ್ಲಿ ನೈತಿಕ ಧೈರ್ಯದ ನಂದಾದೀಪ ಹಚ್ಚಿದವರು ಯಾರು?

೨. ಬಡವರ ವಕೀಲರೆಂದು ಪ್ರಸಿದ್ಧರಾದವರು ಯಾರು?

೩. ರಂಗರಾವ್ ಸ್ಥಾಪಿಸಿದ ಸಂಸ್ಥೆಯ ಹೆಸರೇನು?

೪. ರಂಗರಾವ್ ಕೈಗಾರಿಕಾ ತರಬೇತಿ ಶಾಲೆ ಎಲ್ಲಿ ಸ್ಥಾಪಿಸಿದರು?

೫. ರಂಗರಾವ್ ಕೋರ್ಟ್ ಹಿಲ್ಸ್‌ನಲ್ಲಿ ಯಾವ ಸಂಘ ಸ್ಥಾಪಿಸಿದರು?

೬. ಸರ್ಕಾರ, ರಂಗರಾವ್ ಅವರಿಗೆ ನೀಡಿದ ಬಿರುದು ಯಾವುದು?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಸಾಮಾಜಿಕ ಸುಧಾರಣಾ ಚಳವಳಿಯ ಪ್ರಮುಖ ನಾಯಕರನ್ನು ಹೆಸರಿಸಿ.

೨. ಮಂಗಳೂರು ಜಿಲ್ಲಾ ಕೋರ್ಟ್‌ನಲ್ಲಿ ನಡೆದ ಘಟನೆ ಯಾವುದು?

೩. ರಂಗರಾವ್ ಸಮಾಧಿಯ ಮೇಲೆ ಬರೆದ ಹೇಳಿಕೆ ಯಾವುದು?

೪. ರಂಗರಾವ್ ಪ್ರಾರಂಭಿಸಿದ್ದ ಹೆಣ್ಣು ಮಕ್ಕಳ ಹಾಸ್ಟೆಲ್‌ನಿಂದ ಉಂಟಾದ ಪ್ರಯೋಜನವೇನು?

೫. ರಂಗರಾವ್ ಅಂತರ್ಜಾತಿ ವಿವಾಹಕ್ಕೆ ನೀಡಿದ ಪ್ರೋತ್ಸಾಹ ಗಾಂಧಿ ಮೇಲೆ ನೀಡಿದ ಪ್ರಭಾವ ಏನು?

೬. ರಂಗರಾವ್ ರಾಜಕೀಯ ಮೀಸಲಾತಿಗಾಗಿ ಹೇಗೆ ಪ್ರಯತ್ನಿಸಿದರು?

೭. ಡಿ.ಸಿ.ಎಂ.ಸಂಸ್ಥೆಗೆ ಯಾರು ಯಾರು ಭೇಟಿ ನೀಡಿದ್ದರು?

೮. ರಂಗರಾವ್ ತಮ್ಮ ಉಯಿಲಿನಲ್ಲಿ ಏನು ಬರೆದಿದ್ದರು?

೯. ಗಾಂಧಿಯವರು ರಂಗರಾವ್ ಬಗ್ಗೆ ಏನು ಹೇಳಿದರು?

❖❖❖❖❖

## ೭. ನಿರಾಕರಣೆ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ರಕ್ಷಾ ಕರಂಡವು ಯಾರ ಕೈಯಿಂದ ಕೆಳಗೆ ಬಿದ್ದಿತು?

೨. ಭರತನ ತಂದೆಯ ಹೆಸರೇನು?

೩. ಶಕುಂತಲೆಯ ತಾಯಿಯ ಹೆಸರೇನು?

೪. ಯಾರ ಶ್ರೇಯಸ್ಸಿಗಾಗಿ ಶಕುಂತಲೆ ಅರಮನೆಗೆ ಬಂದಿದ್ದಾಳೆ?

೫. ಶಕುಂತಲೆಯ ಅಂತಃಪುರದಿಂದ ದುಷ್ಯಂತ ಹೊರನಡೆದದ್ದು ಹೇಗೆ?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಆರ್ಯ ಪುತ್ರ ಬಂದಿದ್ದಾನೆ ಎಂದಾಗ ಶಕುಂತಲೆಯ ಪ್ರತಿಕ್ರಿಯೆ ಏನು?

೨. ಅಪರಾಜಿತಾ ಬಳ್ಳಿಯ ಗುಣ ಯಾವುದು?

೩. ಶಕುಂತಲೆ ತನ್ನ ಬದುಕು ಏನಾಗಿದೆ ಎಂದು ಯೋಚಿಸುತ್ತಾಳೆ?

೪. ಶಕುಂತಲೆಯು ಕಂಚಿನ ಧ್ವನಿಯಿಂದ ದುಷ್ಯಂತನಿಗೆ ಹೇಳಿದ್ದೇನು?

೫. ಅರಮನೆಗೆ ಯಾವ ಕಾರಣಕ್ಕಾಗಿ ಬಂದಿದ್ದೆನೆಂದು ಶಕುಂತಲೆ ಹೇಳುತ್ತಾಳೆ?

೬. ದುಷ್ಯಂತರಾಜನು, ಶಕುಂತಲೆಯ ಅಂತಃಪುರದಿಂದ ಹೊರ ನಡೆದಾಗ ಆತನ ಮನಸ್ಥಿತಿ ಹೇಗಿತ್ತು?

❖❖❖❖❖

# ೮. ಕೃಷಿ ಸಂಸ್ಕೃತಿ ಮತ್ತು ಜಾಗತೀಕರಣ

**I. ಒಂದುವಾಕ್ಯದಲ್ಲಿ ಉತ್ತರಿಸಿ:**

೧. ಲೇಖಕರು ಸಿಪಾಯಿ ದಂಗೆಯನ್ನು ಏನೆಂದು ಕರೆದಿದ್ದಾರೆ?

೨. ರೈತರು ಯಾವ ತೆರಿಗೆಯನ್ನು ಪಾವತಿಸಬೇಕಾಯಿತು?

೩. ಬ್ರಿಟಿಷ್ ಸರಕಾರಕ್ಕೆ ತೆರಿಗೆ ಕಟ್ಟಬಾರದೆಂದು ಯಾರು ಹೇಳಿದರು?

೪. ರೈತರ ಬದಲಿಗೆ ಸ್ವಾತಂತ್ರ್ಯವು ಯಾರ ಕೈಗೆ ಸಿಕ್ಕಿತು?

೫. ವಸಾಹತು ಶ್ರೀಮಂತ ರೈತರ ಉದಯಕ್ಕೆ ಯಾವುದು ಸಹಾಯಕವಾಯಿತು?

೬. ದೇಶಗಳಲ್ಲಿ ಯಾವ ರೀತಿಯ ಚಳವಳಿಗಳು ಹುಟ್ಟಿಕೊಂಡವು?

೭. ಜಂಕ್‌ಫುಡ್ ಹೋಟೆಲ್‌ಗಳೆಂದು ಹೀಯಾಳಿಸಿದವರು ಯಾರು?

**II. ಎರಡುಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ರೈತರನ್ನು ಶೋಷಣೆ ಮಾಡಿದವರು ಯಾರು?

೨. ರೈತ ಚಳವಳಿಗಳು ಎಲ್ಲೆಲ್ಲಿ ನಡೆದವು?

೩. ಸಾಲ ಕೇಳಲು ಹೋದ ಬಡರಾಷ್ಟ್ರಗಳ ಮೇಲೆ ವಿಧಿಸಿದ ನಿರ್ಬಂಧಗಳಾವುವು?

೪. ಕೃಷಿ ಜಮೀನನ್ನು ಯಾರು ಖರೀದಿಸುವಂತಿಲ್ಲ?

೫. ರಾಸಾಯನಿಕಗಳನ್ನು ತಿಂದು ಬೆಳೆಯುವ ಪ್ರಾಣಿಗಳಿಗೆ ಯಾವ ರೋಗಗಳು ಬರುತ್ತವೆ?

❖❖❖❖❖

# ೬. ಚತುರನ ಚಾತುರ್ಯ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಹುಲಿ ಕಾಡಿನಲ್ಲಿ ಯಾರಿಗೆ ಎದುರಾಗಿ ಬಂದಿತು?

೨. ಮಹೇಂದ್ರನು ಯಾವ ಯಜ್ಞವನ್ನು ಕೈಗೊಂಡಿದ್ದನು?

೩. ಹುಲಿ ಕನ್ನಡಿಯಲ್ಲಿ ಕಂಡಿದ್ದೇನು?

೪. ಹುಲಿಯು ನಾಪಿತನಿಗೆ ಏನನ್ನು ನೀಡುತ್ತೇನೆಂದಿತು?

೫. ನಾಪಿತನು ತಂದ ದ್ರವ್ಯದಲ್ಲಿ ವಿಪ್ರನಿಗೆ ಎಷ್ಟು ಕೊಟ್ಟನು?

೬. ಹುಲಿಯ ಹಿಂಡನ್ನು ಕಂಡು ಹೆದರಿದ ನಾಪಿತ ಮತ್ತು ವಿಪ್ರ ಎಲ್ಲಿ ಅಡಗಿಕೊಂಡರು?

೭. ವಿಪ್ರನು ಮರದಿಂದ ಎಲ್ಲಿಗೆ ಬಿದ್ದನು?

೮. ನರಿಗೆ ಏಕೆ ಆಶ್ಚರ್ಯವುಂಟಾಯಿತು?

೯. ಅರಣ್ಯ ಜಂತುಗಳಲ್ಲಿ ಬುದ್ಧಿಶಾಲಿಯಾದ ಪ್ರಾಣಿ ಯಾವುದು?

೧೦. ನರಿ ಯಾವ ಹೊಡೆತಕ್ಕೆ ಪ್ರಾಣ ಬಿಟ್ಟಿತು?

**II. ಎರಡು ವಾಕ್ಯಗಳಲ್ಲಿ ಉತ್ತರಿಸಿ:**

೧. ಮಹಾದೇವನ ಉತ್ಸವಕ್ಕೆ ನಾಪಿತನು ತೆರಳಿದ ಉದ್ದೇಶವೇನು?

೨. ಹುಲಿಯ ಗುಹೆಯಲ್ಲಿ ನಾಪಿತ ಏನೇನನ್ನು ಕಂಡನು?

೩. ಎರಡನೆಯ ಬಾರಿ ಮಹಾದೇವನ ಉತ್ಸವಕ್ಕೆ ನಾಪಿತ ತೆರಳಿದ್ದೇಕೆ?

೪. ಕಾಡಿನಲ್ಲಿ ಹುಲಿಗಳೆಲ್ಲಾ ದಿಕ್ಕಾಪಾಲಾಗಿ ಏಕೆ ಓಡಿದವು?

೫. ನರಿಯೊಡನೆ ಬರುತ್ತಿರುವ ಹುಲಿಯನ್ನು ಕಂಡ ನಾಪಿತನು ಏನೆಂದುಕೊಂಡನು?

೬. ನರಿಯನ್ನು ನಾಪಿತ ಹೇಗೆ ಗದರಿಕೊಂಡನು?

❖❖❖❖❖

## ಬೋಳೇಶಂಕರ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಬೋಳೇಶಂಕರನ ಊರು ಯಾವುದು?

೨. ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಉಂಟಾದ ಆಸೆ ಯಾವುದು?

೩. ಪಿಶಾಚಿಗಳು ಮನುಷ್ಯರನ್ನು ಯಾವುದರ ಮೂಲಕ ಪ್ರವೇಶಿಸುತ್ತವೆ?

೪. 'ಬದುಕಿನ ಬಗ್ಗೆ ಅವನಿಗೆ ಒಂದೂ ತಕರಾರಿಲ್ಲ' ಎಂದು ಪಿಶಾಚಿಯು ಯಾರ ಬಗ್ಗೆ ಹೇಳುತ್ತದೆ?

೫. ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ?

೬. ಬೋಳೇಶಂಕರನ ಹೊಟ್ಟೆನೋವು ಯಾವುದರಿಂದ ಮಾಯವಾಯಿತು?

೭. ಬೋಳೇಶಂಕರ ಎಲ್ಲಿ ಕುಳಿತು ಊಟ ಮಾಡಬೇಕೆಂದು ಅವನ ಅತ್ತಿಗೆ ಹೇಳುತ್ತಾಳೆ?

೮. ಬೋಳೇಶಂಕರನಿಂದ ಬೇರು ಕಿತ್ತು ಕೊಳ್ಳಲು ಪಿಶಾಚಿ ಯಾವ ವೇಷದಲ್ಲಿ ಬರುತ್ತದೆ?

೯. ರಾಜಕುಮಾರಿಗೆ ಬಂದ ರೋಗ ಯಾವುದು?

೧೦. ಹುಡುಗಿಯರ ಹಾಡಿಗೆ ಬೋಳೇಶಂಕರ ಬಹುಮಾನವಾಗಿ ಏನನ್ನು ಕೊಡುವನು?

೧೧. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?

೧೨. ಕತ್ತಲೆಯ ನಿಜ ಜನಕನು ಯಾರು?

೧೩. ಅಣ್ಣಂದಿರಿಗೆ ಯಾವ ರೋಗ ಹಿಡಿದಿದೆ ಎಂದು ಬೋಳೇಶಂಕರ ಹೇಳುತ್ತಾನೆ?

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಬೆಟ್ಟದ ಮೇಲಿನ ದೇವತೆ ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?

೨. ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ?

೩. ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ?

೪. ಕೋಡಂಗಿಯು ತಾನು ಬೆಳಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ?

೫. ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ?

೬. ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?

೭. ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ?

೮. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?

೯. ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

೧೦. ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ?

❖❖❖❖❖

# ಪತ್ರ ಲೇಖನಗಳು

ಒಬ್ಬರು ಮತ್ತೊಬ್ಬರೊಂದಿಗೆ ಬರಹದ ಮೂಲಕ ಸಂವಹನ(ಸಂಪರ್ಕ) ಮಾಡುವುದೇ ಪತ್ರ ಲೇಖನ. ಸಂವಹನದ ಈ ಮಾಧ್ಯಮ ಪ್ರಾಚೀನ ಕಾಲದಲ್ಲಿ ಎಲೆ(ಪತ್ರ)ಯ ಮೇಲಿನ ಬರಹದಿಂದ ನಡೆಯುತ್ತಿತ್ತು. ಈಗ ಕಾಗದದ ಮೇಲೆ ಬರೆಯುವ ಅವಕಾಶವಿದ್ದರೂ ಹಳೆಯ ಪದ ಉಳಿದುಕೊಂಡು ಬಂದಿದೆ.

ಪತ್ರ ಲೇಖನ ಪರಿಣಾಮಕಾರಿಯಾಗಿ ಇದ್ದರೆ ಅದರ ಉದ್ದೇಶ ಸಫಲ. ಯಾವುದೇ ಅಂಶ ಅಪೂರ್ಣ, ಅಸ್ಪಷ್ಟ, ಸಂದಿಗ್ಧ ಇರಬಾರದು. ಬರೆದವನ ಗುರುತು, ಬರೆದ ಸ್ಥಳ, ದಿನಾಂಕ, ಯಾರನ್ನುದ್ದೇಶಿಸಿ, ಯಾವ ಸಂದರ್ಭದಲ್ಲಿ ಬರೆಯಲಾಗಿದೆ ಎಂಬ ಅಂಶಗಳು ನಿರ್ದಿಷ್ಟವಾಗಿರಬೇಕು. ಪತ್ರದ ಅಂಗಾಂಶಗಳು:

೧.ಸ್ವವಿಳಾಸ, ೨.ದಿನಾಂಕ ೩.ಸಂಬೋಧನೆ ೪ ವಿಷಯದ ನಿರೂಪಣೆ(ಒಡಲು). ೫.ಮುಕ್ತಾಯ ೬.ಹಸ್ತಾಕ್ಷರ ೭. ಹೊರವಿಳಾಸ (ಬೇರೆ ರಾಜ್ಯಗಳಿಗಾದರೆ ಆಂಗ್ಲಭಾಷೆ ಇರಲಿ)

## ವೈಯಕ್ತಿಕ ಪತ್ರ: ಮಾದರಿ–೧

ನಿಮ್ಮ ಪ್ರವಾಸದ ಅನುಭವ ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಪತ್ರವನ್ನು ಬರೆಯಿರಿ.

೨೧ ಮಾರ್ಚ್ ೨೦೧೩
ಚಿಕ್ಕಬಳ್ಳಾಪುರ

ಪ್ರೀತಿಯಿಂದ ಗೆಳೆಯನಿಗೆ/ಗೆಳತಿಗೆ,

ನೀನು ಕ್ಷೇಮವಾಗಿರುವೆ ಎಂದು ಭಾವಿಸುತ್ತೇನೆ. ನಾನು ಕ್ಷೇಮವಾಗಿದ್ದೇನೆ. ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವಾಸವನ್ನು ಏರ್ಪಡಿಸಿದ್ದರು. ಪ್ರವಾಸಕ್ಕೆ ಹೋಗುವ ಮುಂಚೆ ನಿನಗೆ ಪತ್ರವನ್ನು ಬರೆದಿದ್ದೆನು.

ನಾವೆಲ್ಲರು ಬೇಲೂರು, ಹಳೇಬೀಡು, ಧರ್ಮಸ್ಥಳ, ಉಡುಪಿ, ಮಂಗಳೂರು, ಮಲ್ಪೆ, ಕಾರವಾರ, ಹೊರನಾಡು, ಶೃಂಗೇರಿ ಮುಂತಾದ ಸ್ಥಳಗಳನ್ನು ನೋಡಿದೆವು. ತುಂಬಾ ಸುಂದರವಾದ, ಅದ್ಭುತವಾದ ಸ್ಥಳಗಳಾಗಿದ್ದವು. ನಮ್ಮ ಇತಿಹಾಸವನ್ನು ಸಾಂಸ್ಕೃತಿಕ ಪರಂಪರೆಯನ್ನು ನೆನಪಿಸುವ ದೇವಾಲಯಗಳು, ಸ್ಮಾರಕಗಳು ಚೆನ್ನಾಗಿವೆ. ಜೀವನದಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ಸಲ ನೋಡಲೇಬೇಕು.

ಸಮುದ್ರ ತೀರವನ್ನು ಹೊಂದಿರುವ ಮಂಗಳೂರು, ಮಲ್ಪೆ ತುಂಬಾ ಸುಂದರವಾದ, ರಮಣೀಯವಾದ, ಪ್ರಕೃತಿ ಸೌಂದರ್ಯವನ್ನು ಹೊಂದಿವೆ. ನೀನು ನನ್ನ ಜೊತೆಯಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು.

ನೆನಪುಗಳೊಂದಿಗೆ, ನಿನ್ನ ಪ್ರೀತಿಯ ಗೆಳೆಯ/ತಿ
ಆಕಾಶ್/ ಅನುರಾಧ

ಗೆ,
ದುಷ್ಯಂತ್/ ಶಕುಂತಲ
ದ್ವಿತೀಯ ಪಿಯುಸಿ. 'ಸಿ' ವಿಭಾಗ
ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,
ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ,ಬೆಂಗಳೂರು.

## ವೈಯಕ್ತಿಕ ಮಾದರಿ–೨

ತಂದೆಯವರು, ಹುಟ್ಟುಹಬ್ಬಕ್ಕೆ ಕಳುಹಿಸಿದ ಉಡುಗೊರೆಗೆ ಕೃತಜ್ಞತೆ ಸಲ್ಲಿಸಲು ಗೋಪಿನಾಥನು ಬರೆದ ಪತ್ರ.

೧೬ ಜನವರಿ ೨೦೧೩
ಮೈಸೂರು

ತೀರ್ಥರೂಪು ತಂದೆಯವರಿಗೆ,

ನಿಮ್ಮ ಪ್ರೀತಿಯ ಮಗ ಗೋಪಿನಾಥನು ಮಾಡುವ ನಮಸ್ಕಾರಗಳು, ನನ್ನ ಹದಿನೈದನೆಯ ಹುಟ್ಟು ಹಬ್ಬದ ದಿನದಂದು ತಾವು ಉಡುಗೊರೆಯಾಗಿ ಕೈಗಡಿಯಾರವನ್ನು ಕಳುಹಿಸಿ ಶುಭಾಶಯವನ್ನು ತಿಳಿಸಿದ್ದುದಕ್ಕಾಗಿ ತಮಗೆ ನನ್ನ ವಂದನೆಗಳು. ಕೈಗಡಿಯಾರ ತುಂಬಾ ಚೆನ್ನಾಗಿದೆ. ತಾವು ನನ್ನ ನೆನಪು ಮಾಡಿಕೊಂಡು ಹುಟ್ಟುಹಬ್ಬಕ್ಕೆ ಕಳುಹಿಸಿದ ಉಡುಗೊರೆಯು ನನಗೆ ಸಂತೋಷವನ್ನು ತಂದಿದೆ.

ಕಾಲೇಜಿನಲ್ಲಿಯೂ ನನ್ನ ಗೆಳೆಯರೆಲ್ಲರೂ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದರು. ನಾನು ಈ ಬಾರಿ ಹೆಚ್ಚು ಅಂಕ ಗಳಿಸಬೇಕೆಂಬ ಆಸೆಯಿಂದ ಚೆನ್ನಾಗಿ ಓದುತ್ತಿದ್ದೇನೆ. ನಿಮ್ಮ ಪ್ರೀತಿಯ ವಿಶ್ವಾಸಗಳಿಗೆ ಸದಾ ಆಸೆ ತುಂಬುವ ನಿಮ್ಮ ಮಗನ ನೆನಪುಗಳು. ತಾಯಿಗೆ ನನ್ನ ನಮಸ್ಕಾರಗಳನ್ನು ತಿಳಿಸಿರಿ. ಪ್ರೀತಿಯ ತಂಗಿ ದೀಪಾಳಿಗೆ ನನ್ನ ಆಶೀರ್ವಾದಗಳು.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗ
ಗೋಪಿನಾಥ

ಗೆ,
ಪುರುಷೋತ್ತಮ,
ಹೊಸಕೋಟೆ,
ಹಳೇಬೀಡು ಅಂಚೆ,
ಪಾಂಡವಪುರ ತಾಲ್ಲೂಕು–೫೭೧೪೩೪.

## ವ್ಯವಹಾರ ಪತ್ರ

ವೈಯಕ್ತಿಕ ಪತ್ರಕ್ಕಿಂತ ಭಿನ್ನವಾದ ಲೇಖನ ಶೈಲಿ ವ್ಯವಹಾರ ಪತ್ರದಲ್ಲಿರಬೇಕು. ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ಅಥವಾ ವಾಣಿಜ್ಯ ಸಂಘಟನೆಯ ಮುಖ್ಯಸ್ಥನು ವ್ಯವಹಾರಿಕ ಉದ್ದೇಶವಿಟ್ಟುಕೊಂಡು ಬರೆದ ಪತ್ರ. ಇಲ್ಲಿ ಆತ್ಮೀಯತೆ, ಕೌಟುಂಬಿಕ ಸಾಮೀಪ್ಯ-ಸ್ನೇಹಭಾವ ಇರುವುದಿಲ್ಲ. ಆದ್ದರಿಂದ ಸಂಬೋಧನೆ ಮತ್ತು ಮುಕ್ತಾಯದ ಅಂಶ ಭಿನ್ನವಾಗುತ್ತವೆ. ನಿರೂಪಣೆಯು ವಸ್ತುನಿಷ್ಠ ಶೈಲಿಯಲ್ಲಿರಬೇಕು. ಪತ್ರದ ವಿಷಯ ಮತ್ತು ಸಂದರ್ಭದ ಉಲ್ಲೇಖವಿರಬೇಕು.

### ವ್ಯವಹಾರ ಪತ್ರ: ಮಾದರಿ-೧

ಕುವೆಂಪು ಅವರ ಜೀವನ ಚರಿತೆ ಪುಸ್ತಕವನ್ನು ಕಳುಹಿಸಲು ಕೋರಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಕಾಗದ ಬರೆಯಿರಿ:

೧ನೇ ಜನವರಿ, ೨೦೧೩

ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು,
ಚಾಮರಾಜಪೇಟೆ
ಬೆಂಗಳೂರು-೫೬೦೦೧೮

ಮಾನ್ಯರೆ,

ವಿಷಯ: ಕುವೆಂಪು ಅವರ ಜೀವನ ಚರಿತೆ ಕೃತಿ ಕೊಂಡುಕೊಳ್ಳುವ ಬಗ್ಗೆ.

ತಮ್ಮ ಸಂಸ್ಥೆಯು, ಕುವೆಂಪು ಅವರ ಜೀವನ ಚರಿತೆ 'ವಿಶ್ವಕವಿ ಕುವೆಂಪು' ಕೃತಿಯನ್ನು ಪ್ರಕಟಿಸಿರುವುದು ಸಂತಸದ ಸಂಗತಿ. ನಮ್ಮಂತಹ ವಿದ್ಯಾರ್ಥಿಗಳಿಗೂ ಕೈಗೆಟುಕುವಂತಹ ಬೆಲೆಯನ್ನಿಟ್ಟಿರುವುದು ಸಂತೋಷವಾಗಿದೆ. ನಮ್ಮ ಕಾಲೇಜಿನ ಪ್ರಥಮ ಪಿಯುಸಿಯ ಎಲ್ಲಾ ವಿದ್ಯಾರ್ಥಿಗಳು 'ವಿಶ್ವಕವಿ ಕುವೆಂಪು' ಕೃತಿಯನ್ನು ಕೊಂಡುಕೊಳ್ಳಲು ಇಚ್ಛಿಸಿರುತ್ತಾರೆ. ಆದ್ದರಿಂದ ೧೩೦ ಪುಸ್ತಕಗಳನ್ನು ಅಂಚೆ ಮೂಲಕ ಕಳುಹಿಸಿ ಕೊಡಿ. ಒಟ್ಟು ಪುಸ್ತಕಗಳ ಬೆಲೆಯಾದ ಸಾವಿರದ ಮೂರು ನೂರು ರೂಪಾಯಿಗಳ ಡಿಡಿಯನ್ನು ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದ್ದೇನೆ. ಆದಷ್ಟು ಬೇಗ ಪುಸ್ತಕಗಳನ್ನು ಕಳುಹಿಸಿ ಕೊಡಬೇಕೆಂದು ವಿನಂತಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
(ಲಕ್ಷ್ಮಿ ಲೋಲ)
ಪ್ರಥಮ ಪಿ.ಯು.ಸಿ. ಎ. ವಿಭಾಗ
ಸ. ಪ. ಪೂ. ಕಾಲೇಜು.
ಗುಲ್ಬರ್ಗಾ

## ಕಛೇರಿ ಪತ್ರ ಮಾದರಿ

ನಿಮ್ಮ ಪ್ರದೇಶದ ಬರಗಾಲವನ್ನು ವಿವರಿಸಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಬರ ಪರಿಹಾರ ಕಾರ್ಯ ಕೈಗೊಳ್ಳಲು ವಿನಂತಿಸಿ.

೨೫ ಮೇ ೨೦೧೩
ಬಳ್ಳಾರಿ.

ಇಂದ,
ದೇವಾನಂದ,
#೫೪, ಕೋ. ಚೆನ್ನಬಸಪ್ಪ ರಸ್ತೆ,
ಲಾಲ್‌ಬಹದ್ದೂರ್ ಶಾಸ್ತ್ರಿ ನಗರ,
ಬಳ್ಳಾರಿ.

ಗೆ,
ಮಾನ್ಯ ಜಿಲ್ಲಾಧಿಕಾರಿಗಳು,
ಬಳ್ಳಾರಿ ಜಿಲ್ಲೆ,
ಬಳ್ಳಾರಿ.

ಮಾನ್ಯರೆ,

ವಿಷಯ: ಬರಗಾಲ ಪರಿಹಾರ ಕಾರ್ಯ ಕೈಗೊಳ್ಳಲು ಮನವಿ.

ಕಳೆದ ಮೂರು ವರುಷಗಳಿಂದ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬಂದಿಲ್ಲ. ವರ್ಷವಿಡೀ ಮಳೆ ಬೀಳದೆ ಬೆಳೆಯು ಇಲ್ಲವಾಗಿದೆ. ಮೊದಲೇ ಬರಡು ಪ್ರದೇಶವೆಂದು ಖ್ಯಾತಿಗಳಿಸಿರುವ ಬಳ್ಳಾರಿ ಜಿಲ್ಲೆಯಲ್ಲಿ ಕುಡಿಯಲು ನೀರಿಲ್ಲ. ಜಾನುವಾರುಗಳಿಗೆ ಮೇವಿಲ್ಲದೆ ಸಾಯುತ್ತಿವೆ. ಜನರು ಗುಳೆ ಹೋಗುತ್ತಿದ್ದಾರೆ. ಆದಷ್ಟು ಬೇಗ ನಮ್ಮ ಜಿಲ್ಲೆಯ ಜನತೆಗೆ ಬರಗಾಲ ಪರಿಹಾರ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಕೈಗೊಂಡು ಜನರಿಗೆ ನೀರು, ಆಹಾರ ವ್ಯವಸ್ಥೆ, ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವಿನ ವ್ಯವಸ್ಥೆ ಮಾಡಬೇಕೆಂದು ವಿನಂತಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ದೇವಾನಂದ)

ವೈಯಕ್ತಿಕ ಪತ್ರ ಹಾಗೂ ವ್ಯವಹಾರ ಪತ್ರದ ಒಂದೊಂದು ಪತ್ರವನ್ನು ಬರೆಯಿರಿ:

# ಗಾದೆಗಳು

ಅರ್ಥಗರ್ಭಿತ ಮಾತುಗಳುಳ್ಳ ಚಿಕ್ಕದೂ ಚೊಕ್ಕವೂ ಆದ ವಾಕ್ಯವೇ ಗಾದೆ. ಇಲ್ಲಿ ಮಾತು ಮಿತವಾಗಿರುತ್ತದೆ. ಮಾತುಗಳು ಹೊಳಪಾಗಿರುತ್ತವೆ. ಹರಿತವಾಗಿಯೂ ಕಾಣುತ್ತವೆ. ಒಂದು ಭಾಷೆಗೆ ಗಾದೆಗಳು ವಜ್ರದ ಗಣಿಗಳಂತೆ ಕೆಲಸ ಮಾಡುತ್ತವೆ. ಒಂದು ಜನಾಂಗದ ಅನುಭವ ಸಂಪತ್ತು ಗಾದೆಗಳಲ್ಲಿ ಸಂಗ್ರಹಗೊಂಡಿರುತ್ತವೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಗಾದೆ ಮಾತೇ ಗಾದೆಗಳ ಹಿರಿಮೆಯನ್ನು ಸಾರುತ್ತವೆ.

ಗಾದೆಯ ಆಕಾರ ಸಂಕ್ಷಿಪ್ತವಾಗಿದ್ದರೂ, ಸಾವಿರ ಮಾತಿನಲ್ಲಿ ಹೇಳಬಹುದಾದುದನ್ನು ನಾಲ್ಕು ಮಾತುಗಳಲ್ಲಿ ಹೇಳಬಹುದಾದದ್ದು. ಒಂದು ಜನಾಂಗದ ದೀರ್ಘಕಾಲದ ಅನುಭವ ಸಂಪತ್ತು, ಕಲಾತ್ಮಕತೆ ಅವುಗಳ ಉಸಿರೆಂದೂ ಹೇಳಬಹುದು. 'ಗಾದೆ ಇಲ್ಲದ ಮನೆಯಿಲ್ಲ, ಉಪ್ಪಿಲ್ಲದ ಅಡುಗೆ ಇಲ್ಲ' ಎನ್ನಬಹುದು. 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಗಾದೆಯು ಸರ್ವಕಾಲಿಕ ಮೌಲ್ಯಕ್ಕೆ ಸಾಕ್ಷಿಯಾಗಿದೆ. ರಾಗೌ ಅವರ ಪ್ರಕಾರ–"ಗಾದೆಗಳೆಂದರೆ ಜನಸಾಮಾನ್ಯರಲ್ಲಿ ಬಳಕೆಯಲ್ಲಿದ್ದು, ಈಗಲೂ ಇರುವ, ಉಪದೇಶಾತ್ಮಕ ಅಥವಾ ಸಲಹೆಯನ್ನು ನೀಡುವ, ನಿಜವಾದ ಅರ್ಥವನ್ನು ಮರೆಸಿ, ಅಲಂಕಾರಿಕವಾಗಿ, ವ್ಯಕ್ತವಾಗಿರುವ, ರೂಪಕ ಅಥವಾ ನಿಗೂಢಾರ್ಥ ದ್ಯೋತಕವಾಗಿ ರೂಪ ಬದಸಿ ಕಾಣಿಸಿಕೊಳ್ಳುವ ಜನಾಂಗವೊಂದರ ಸೂಕ್ತಿಯೇ ಆಗಿದೆ". ಜನಪದರು ಕಟ್ಟಿದ ಈ ಗಾದೆಗಳನ್ನು–ಲೋಕೋಕ್ತಿ, ನಾಣ್ನುಡಿ ಎಂಬುದಾಗಿಯೂ ಕರೆದಿರುತ್ತಾರೆ.

**ಉದಾ: ಕೈಕೆಸರಾದರೆ ಬಾಯಿ ಮೊಸರು:**

ಕನಕದಾಸರು ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂದು ಹಾಡಿದ್ದಾರೆ. ಎಲ್ಲರೂ ಮಾಡುವುದು ಬದುಕಲು ಮೂಲ ದ್ರವ್ಯವಾದ ಊಟಕ್ಕಾಗಿಯೇ. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಬರುವ ವೃತ್ತಿಯನ್ನು ಸ್ವೀಕರಿಸಿ ದುಡಿಯುತ್ತಾನೆ. ಕೆಲವರಿಗೆ ಮೈಮುರಿದು ದುಡಿಯುವುದೆಂದರೆ ಕಷ್ಟ. ಹಲವರಿಗೆ ದುಡಿಮೆಯೇ ದೇವರು. ದುಡಿದರೆ ಪ್ರತಿಫಲ ದೊರೆಯುತ್ತದೆ. ಮಳೆಗಾಲದಲ್ಲಿ ರೈತ ಕೈಕಾಲಗಳಿಗೆ ಕೆಸರಾಗುತ್ತದೆಂದು ಸುಮ್ಮನಾಗುವುದಿಲ್ಲ. ಹೊಲಕ್ಕೆ ಹೋಗಿ ಬೀಜ ಬಿತ್ತಿ ಬೆಳೆ ಬೆಳೆಯುತ್ತಾನೆ. ಅನಂತರ ಸುಖವಾಗಿ ಹೆಂಡತಿ ಮಕ್ಕಳೊಂದಿಗೆ ಬಾಳುತ್ತಾನೆ. ಕೈ ಕೆಸರಾದರೇನೆ ಬಾಯಿ ಮೊಸರಾಗುವುದು. ದುಡಿಮೆ ಮಾಡಿದ್ದರಿಂದ ಭೂಮಿತಾಯಿ ರೈತನಿಗೆ ಒಳ್ಳೆಯ ಬೆಳೆ ನೀಡುತ್ತಾಳೆ. ಈ ಗಾದೆ ಕೇವಲ ರೈತಾಪಿ ಮಂದಿಗೆ ಸೀಮಿತವಾಗಿಲ್ಲ. ದುಡಿಯುವ ಎಲ್ಲಾ ವರ್ಗದ ಜನರಿಗೂ ಅನ್ವಯವಾಗುತ್ತದೆ. ಕವಿ ಬರೆಯುತ್ತಾನೆ. ಬಡಗಿ ಮರಗೆಲಸ ಮಾಡುತ್ತಾನೆ. ಕೆಲಸ ಮಾಡುವುದರಿಂದಲೇ ಬದುಕು ಹಸನಾಗುತ್ತದೆ. ಯಾರು ಉದ್ಯೋಗಿಯಾಗಿ ದುಡಿಯುತ್ತಾನೋ ಅತ ಕ್ರಿಯಾಶೀಲನಾಗಿರುತ್ತಾನೆ, ಬುದ್ಧಿವಂತನಾಗಿರುತ್ತಾನೆ. ಉದ್ಯೋಗ ಯಾವುದೇ ಆಗಿರಲಿ ಶ್ರದ್ಧೆಯಿಂದ ಮಾಡಿದರೆ ದುಡಿದವನು ದುಡ್ಡು ಗಳಿಸುತ್ತಾನೆ. ದುಡಿಮೆಯ ಮಹತ್ವವನ್ನು ಈ ಗಾದೆ ಸೊಗಸಾಗಿ ವಿವರಿಸುತ್ತದೆ. ಕಾಯಕವೇ ಕೈಲಾಸ ಎಂಬ ಶರಣರ ಮಾತು ನೆನಪಾಗುತ್ತದೆ. ಕೆಸರು ಮೊಸರುಗಳು ಎರಡು ವಿರುದ್ಧ ಪದಗಳಾಗಿದ್ದರೂ ಪ್ರಾಸದ ದೃಷ್ಟಿಯಿಂದ ಮನಸ್ಸಿಗೆ ಮುದ ನೀಡುತ್ತದೆ.

ಯಾರು ದುಡಿಮೆಯಿಂದ ಪಲಾಯನ ಮಾಡುತ್ತಾರೋ ಅವರಿಗೆ ದಕ್ಕುವುದು ಮೊಸರಲ್ಲ; ಕೆಸರೆಂಬುದನ್ನು ಗಾದೆ ಧ್ವನಿಸುತ್ತದೆ.

**ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ.**

ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಪರಮ ಪೂಜ್ಯ ಸ್ಥಾನವನ್ನು ನೀಡಲಾಗಿದೆ. ಮಾತೃ ದೇವೋಭವ ಎಂದು ಕರೆಯುತ್ತೇವೆ. 'ಯತ್ರ ನಾರ್ಯಂತು ಪೂಜ್ಯತೇ ರಮಂತೇ ತತ್ರ ದೇವತಾಃ' (ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲಸಿರುತ್ತಾರೆ)ಎಂದು ಹೇಳಿದ್ದಾರೆ. ಉಪ್ಪಿಲ್ಲದಿದ್ದರೆ ಊಟ ರುಚಿಸುವುದಿಲ್ಲ. ತಾಯಿ ಇಲ್ಲದಿದ್ದರೆ ಪ್ರೀತಿ ಇರುವುದಿಲ್ಲ. ಊಟಕ್ಕೆ ಉಪ್ಪು ಅತಿ ಮುಖ್ಯ. ಬೇರೆ ಏನಿಲ್ಲದಿದ್ದರೂ ನಡೆಯುತ್ತದೆ; ಆದರೆ ಉಪ್ಪನ್ನೂ ಪದಾರ್ಥಕ್ಕೆ ತಕ್ಕಂತೆ ಹಾಕಿಕೊಳ್ಳದಿದ್ದರೆ ರುಚಿಯೇ ಬರುವುದಿಲ್ಲ. ಸಪ್ಪೆಯಾಗುತ್ತದೆ. ಸರಿ ಇದ್ದರೆ ನಾಲಿಗೆ ಚಪ್ಪರಿಸುತ್ತೇವೆ. ಹಾಗೆಯೇ ಬದುಕಿನಲ್ಲಿ ಮಾನವ ಮಾನವೀಯತೆಯ ಮಡಿಲಲ್ಲಿ ಬೆಳೆಯ ಬೇಕಾದರೆ ತಾಯಿಯಾದವಳು ಇರಬೇಕು. ಆಕೆ ನಿತ್ಯಬಂಧುವಾಗಿ ಕಷ್ಟಸುಖಗಳಲ್ಲಿ ಸಮಭಾಗಿಯಾಗಿ ತಾನೇ ಸ್ವೀಕರಿಸುತ್ತಾಳೆ, ಪಾಲಿಸುತ್ತಾಳೆ. ಹಣದ ಗಂಟಿದ್ದರೆ ನೆಂಟರು ಬರುತ್ತಾರೆ. ತಾಯಿಯಾದವಳು ಸದಾಕಾಲ ತನ್ನ ಮಕ್ಕಳ ಬಳಿ ಇರುತ್ತಾಳೆ. ಯಾರನ್ನೂ ಬೇಕಾದರು ತರಬಹುದು. ತಾಯಿಯನ್ನು ಮಾತ್ರ ತರಲು ಸಾಧ್ಯವಿಲ್ಲ. ಅಮೂಲ್ಯ ಊಟದಲ್ಲಿ ಉಪ್ಪಿಗಿರುವ ಸ್ಥಾನವೇ, ಜೀವನದಲ್ಲಿ ತಾಯಿಗೂ ಇದೆ. ಯಾವುದೇ ಋಣವನ್ನು ತೀರಿಸಿದರೂ, ತಾಯಿ ಋಣ, ಉಪ್ಪಿನ ಋಣವನ್ನು ಯಾರಿಂದಲೂ ತೀರಿಸಲು ಸಾಧ್ಯವಿಲ್ಲ.

**ಕೆಲವು ಗಾದೆಗಳು:**

೧. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

೨. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ.

೩. ಅಕ್ಕಿ ಮೇಲಾಸೆ ನೆಂಟರ ಮೇಲೆ ಪ್ರೀತಿ.

೪. ಆಕಳು ಕಪ್ಪಾದರೆ ಹಾಲು ಕಪ್ಪೇ?

೫. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

೬. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

೭. ಊರಿಗೆ ಉಪಕಾರಿ ಮನೆಗೆ ಮಾರಿ.

೮. ಎತ್ತು ಏರಿಗೆ ಎಳೆದ್ರೆ, ಕೋಣ ನೀರಿಗೆ ಎಳೀತು.

೯. ಚಿನ್ನ ತಿಂದು ಬದುಕಲಾಗುತ್ತ,

೧೦. ತುಂಬಿದ ಕೊಡ ತುಳುಕುವುದಿಲ್ಲ.

೧೧. ಬೆಳ್ಳಗಿರುವುದೆಲ್ಲ ಹಾಲಲ್ಲ.

೧೨. ಮಾಡಿದ್ದೊಣ್ಣೋ ಮಹಾರಾಯ.

೧೩. ತಾಳಿದವನು ಬಾಳಿಯಾನು.

೧೪. ಮಾತು ಬೆಳ್ಳಿ, ಮೌನ ಬಂಗಾರ

೧೫. ಆಳಾಗ ಬಲ್ಲವನು ಅರಸಾಗುವ.

**ಐದು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ:**

# ಪ್ರಬಂಧ ರಚನೆ

ಒಂದು ವಿಷಯವೊಂದನ್ನು ಕುರಿತು ನಮ್ಮ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವ ಲಿಖಿತ ಸಾಹಿತ್ಯದ ಒಂದು ಪ್ರಕಾರಕ್ಕೆ ಪ್ರಬಂಧ ರಚನೆ ಎನ್ನುತ್ತಾರೆ. ಬರವಣಿಗೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸುವತ್ತ ನಡೆಸುವ ಸತತ ಪ್ರಯತ್ನ. ಬರೆಯುತ್ತ ಹೋದಂತೆ ಪ್ರಬಂಧ ರಚನಾ ಸಾಮರ್ಥ್ಯವು ವೃದ್ಧಿಗೊಳ್ಳುತ್ತಾ ಹೋಗುತ್ತದೆ.

ಪ್ರಬಂಧದಲ್ಲಿ ವಿಚಾರದ ಏಕತೆ, ಕ್ರಮಬದ್ಧತೆ ವಿಚಾರ ಸಂಗ್ರಹ, ಸರಳ ಶೈಲಿ, ವೈಯಕ್ತಿಕತೆ, ಸೂಕ್ತವಾದ ವಿಷಯ ನಿರೂಪಣೆ, ಅವುಗಳ ತಾರ್ಕಿಕ ಜೋಡಣೆ ಮತ್ತು ಪ್ರಭಾವಶಾಲಿಯಾದ ಸರಳಶೈಲಿ ಇರಬೇಕು.

ಪ್ರಬಂಧ ರಚನೆಯ ಹಂತಗಳನ್ನು ಈ ರೀತಿ ಹೇಳಬಹುದು; ವಿಷಯದ ಆಯ್ಕೆ, ವಿಷಯದ ವಿಶ್ಲೇಷಣೆ, ಕ್ರೋಢೀಕರಣ, ಕರಡು ಪ್ರತಿರಚನೆ, ಪುನರಾವರ್ತನೆ ಮತ್ತು ಅಂತಿಮ ಪ್ರತಿರಚನೆ.

ಪ್ರಬಂಧವು ಪೀಠಿಕೆ, ಒಡಲು ಮತ್ತು ಉಪಸಂಹಾರಗಳೆಂಬ ಉಪಾಂಗಗಳನ್ನೊಳಗೊಂಡಿರುತ್ತದೆ.

ವಾಕ್ಯವೃಂದವು ಒಂದೇ ವಿಷಯ ಬಿಂದುವಿನ ಸುತ್ತ ಹೆಣೆದ ಅನೇಕ ವಾಕ್ಯಗಳನ್ನು ಹೊಂದಿರುತ್ತವೆ. ಬರೆಯಬೇಕಾದ ವಿಷಯನ್ನನುಸರಿಸಿ ವಾಕ್ಯವೃಂದವನ್ನು ಚಿಕ್ಕದು, ದೊಡ್ಡದು ಮಾಡಬಹುದು. ಅಲ್ಲಲ್ಲಿ ಸೂಕ್ತಿಗಳು, ಗಾದೆಗಳು, ಉದ್ಧರಣಗಳಿದ್ದರೆ, ಓದುಗರಿಗೆ ಇಷ್ಟವಾಗುತ್ತದೆ. ಒಂದು ಪ್ಯಾರಾಗ್ರಾಫ್‌ನ ಮೊದಲ ವಾಕ್ಯವು ವಿಷಯವನ್ನು ಪ್ರಾರಂಭಿಸಿದರೆ, ಕೊನೆಯ ವಾಕ್ಯವು ಆ ವಿಷಯವನ್ನು ಉಪಸಂಹಾರ ಮಾಡುತ್ತದೆ.

## ಕೆಲವು ಪ್ರಬಂಧದ ವಿಷಯಗಳು

೧. ಅತಿವೃಷ್ಟಿ ಅನಾವೃಷ್ಟಿ
೨. ಕೃಷಿ ಪದ್ಧತಿ
೩. ಚಲನಚಿತ್ರ
೪. ಜಾಗತೀಕರಣ
೫. ಜಾಹೀರಾತುಗಳು
೬. ಪುಸ್ತಕಗಳ ಮಹತ್ವ
೭. ಫ್ಯಾಷನ್ ಪ್ರಪಂಚ
೮. ಬದುಕುವ ಕಲೆ
೯. ಬರಗಾಲ
೧೦. ಯೋಗಾಭ್ಯಾಸ
೧೧. ರಾಜಕಾರಣ

೧೨. ಹದಿ ಹರೆಯ

## ಹವ್ಯಾಸಗಳು:

ಬಿಡುವಿನ ವೇಳೆಯನ್ನು ಉಪಯುಕ್ತವಾಗಿ ಬಳಸಲು ಅನೇಕರು ಅನೇಕ ಚಟುವಟಿಕೆಗಳನ್ನು ಹೊಂದಿರುತ್ತಾರೆ. ಇದಕ್ಕೆ 'ಹವ್ಯಾಸಗಳು' ಎಂದು ಕನ್ನಡದಲ್ಲಿಯೂ, 'ಹಾಬಿ' ಎಂದು ಇಂಗ್ಲೀಷ್‌ನಲ್ಲಿಯೂ ಕರೆಯುತ್ತಾರೆ. ಬಿಡುವಿನ ವೇಳೆಯನ್ನು ಸಾರ್ಥಕವಾಗಿ ಬಳಸಿಕೊಳ್ಳುವುದು ಎಂದರೇನು? ನಮಗೆ ಶ್ರಮವೆನ್ನಿಸದೇ, ಆನಂದದಾಯಕವಾದ, ನಾವು ಇಷ್ಟಪಡುವ ಯಾವುದೇ ಚಟುವಟಿಕೆಯನ್ನು ಅನುಸರಿಸುವುದು. ಇಲ್ಲಿ ಶ್ರಮ, ಪರಿಶ್ರಮ ಎರಡೂ ಇರಬಹುದು. ಆದರೆ ಅದರಿಂದ ನಮಗೆ ದೊರೆಯುವುದು ಆನಂದ, ಉತ್ಸಾಹ. ಎಷ್ಟೋ ವೇಳೆ ಶ್ರಮವಿಲ್ಲದೇ ಕುರ್ಚಿ ಮೇಲೆ ಫ್ಯಾನ್ ಕೆಳಗೆ ಕುಳಿತು ಮಾಡುವ ಕೆಲಸವೂ ಶ್ರಮದಾಯಕವೆನ್ನಿಸಿ ಬೇಸರ ತರುವಂತಹುದು ಎನ್ನಿಸಬಹುದು. ಇದು ನಮ್ಮ ಮನಃಪ್ರವೃತ್ತಿಗೆ ಸಂಬಂಧಿಸಿದ ವಿಷಯ. ಹಾಬಿಗಳನ್ನು ವರ್ಗೀಕರಿಸುವುದೂ ಪಟ್ಟಿ ಮಾಡುವುದೂ ಅಸಾಧ್ಯ. ಜಗತ್ತಿನ ಯಾವುದೇ ಕ್ಷೇತ್ರ, ಯಾವುದೇ ಕೆಲಸ ಇದಕ್ಕೆ ಹೊರತಲ್ಲ. ಹವ್ಯಾಸ ಚಟುವಟಿಕೆಯಾದರೂ ನಮಗೆ ವಿಶ್ರಾಂತಿ ನೀಡಬಲ್ಲದು. ನಮ್ಮ ಅನುಕೂಲಕ್ಕಾಗಿ ಹವ್ಯಾಸಗಳನ್ನು– (ಅ) ಸಂಗ್ರಹಿಸುವುದು (ಆ) ಸಂಚಯಿಸುವುದು (ಇ) ಕೆಲಸ ಮಾಡುವುದು ಎಂದು ವರ್ಗೀಕರಿಸೋಣ. ಮೊದಲ ವರ್ಗದಲ್ಲಿ, ಅಂಚೆ ಚೀಟಿ, ನಾಣ್ಯ, ವಿವಿಧ ರೀತಿಯ ಪೆನ್‌ಗಳು, ಬೆಲೆಬಾಳುವ ಹರಳುಗಳು, ಪ್ರಾಚೀನ ವಸ್ತುಗಳು ಇತ್ಯಾದಿಗಳನ್ನು ಸೇರಿಸಬಹುದು. ಇವುಗಳನ್ನು ಸಂಗ್ರಹಿಸಿ ಶಾಸ್ತ್ರೀಯವಾಗಿ ಅಧ್ಯಯನ ಮಾಡಬಹುದು. ಅಧ್ಯಯನದ ಫಲವನ್ನು ಇತರರೊಡನೆ ಹಂಚಿಕೊಳ್ಳಬಹುದು. ಎರಡನೆಯ ವರ್ಗದಲ್ಲಿ ಹೊರಸಂಚಾರ, ಗಾಳಿಸಂಚಾರ, ಪರ್ವತಾರೋಹಣ, ಜಲಯಾನ, ವಾಯುಯಾನ, ಪ್ರವಾಸ, ಪ್ರಾಣಿ–ಪಕ್ಷಿ ವೀಕ್ಷಣೆ, ಜಾನಪದ ಅಧ್ಯಯನ ಇಂತಹ ಹಲವು ಹತ್ತು ಚಟುವಟಿಕೆಗಳನ್ನು ಸೇರಿಸಬಹುದು.

## ಮೂಢನಂಬಿಕೆ

ನಂಬಿಕೆ ಬದುಕಿನ ತಳಹದಿ. ಪ್ರತಿಯೊಬ್ಬನೂ ಒಂದಲ್ಲ ಒಂದು ನಂಬಿಕೆಯ ಊರುಗೋಲು ಹಿಡಿದೇ ಬದುಕಿನ ಹಾದಿಯಲ್ಲಿ ಮುನ್ನಡೆಯುತ್ತಾನೆ. ಎಲ್ಲರಿಗೂ ಸರಿ ಎನ್ನಿಸಿದ ನಂಬಿಕೆಯೊಂದು ಕೆಲವೊಮ್ಮೆ ನಮ್ಮ ನಂಬಿಕೆಯಾಗಬಹುದು. ಆದರೆ ಇನ್ನೂ ಕೆಲವೊಮ್ಮೆ ನಮಗೆ ಸರಿಯೆನ್ನಿಸಿದ ನಂಬಿಕೆಯೇ ಸರಿಯೆಂದು ನಾವು ತಿಳಿಯಬಹುದು. ಮೊದಲನೆಯದು ಸಾಮಾಜಕ ನಂಬಿಕೆ. ಎರಡನೆಯದು ವೈಯಕ್ತಿಕ ನಂಬಿಕೆ. ಆದರೆ ಒಂದು ಸಮಾಜದ ಬಹುಜನ ನಂಬಿದ ಸಾಮಾಜಿಕ ನಂಬಿಕೆ ಸರಿಯಾಗಿಯೇ ಇರುತ್ತದೆ ಎಂದು ಹೇಳಲಾಗುವುದಿಲ್ಲ.

ವ್ಯಕ್ತಿಯೂ ಕೂಡಾ ಸಮಾಜಕ್ಕಿಂತ ಭಿನ್ನವಾದ ನಂಬಿಕೆಯನ್ನು ಇರಿಸಿಕೊಳ್ಳಲೂಬಹುದು. ಮೂಢನಂಬಿಕೆಯೆಂದರೆ ಅತಾರ್ಕಿಕ, ಅವೈಜ್ಞಾನಿಕ, ಅವಾಸ್ತವವಾದುದನ್ನು ಸತ್ಯವೆಂದು ನಂಬಿಕೊಂಡು ಬರುವ ಭಾವನೆ. ಮೂಢನಂಬಿಕೆಗಳಿಗೆ ಒಂದು ಪರಂಪರೆಯೇ ಇದೆ. ಹಿಂದುಳಿದ, ಮುಂದುವರಿದ ದೇಶಗಳನ್ನೆದೆ ಪ್ರತಿಯೊಂದು ದೇಶದಲ್ಲೂ ಮೂಢನಂಬಿಕೆಗಳು ಇದ್ದೇ ಇರುತ್ತವೆ. ಧರ್ಮ, ಭಾಷೆ, ಜಾತಿ, ಮತ, ಪ್ರಾಣಿ, ಪಕ್ಷಿ, ಮನುಷ್ಯನೆನ್ನದೆ ಪ್ರತಿಯೊಂದರ ಕುರಿತಾಗಿ ಮೂಢನಂಬಿಕೆಗಳು ಪ್ರತಿಯೊಂದು ದೇಶದಲ್ಲೂ ಬಳಕೆಯಲ್ಲಿವೆ. ಉದಾ: ನಮ್ಮ ದೇಶದಲ್ಲಿ ಕಾಗೆ, ಗೂಬೆಯಂತಹ ಪಕ್ಷಿಗಳು ಬೆಕ್ಕು, ಹಲ್ಲಿಯಂತಹ ಜೀವಿಗಳ

ಅಪಶಕುನದ ದ್ಯೂತಕವಾಗಿವೆ. ನಮ್ಮ ದೇಶದಲ್ಲಿ ಇಂದಿಗೂ ನೂರಾರು ಮೂಢನಂಬಿಕೆಗಳು ಮನೆಯ ಮಾಡಿಕೊಂಡಿವೆ. ಹವಾಮಾನದ ವೈಪರಿತ್ಯದಿಂದ ಮಳೆಯಾಗಲಿಲ್ಲವೆಂಬ ಸತ್ಯವನ್ನರಿಯದೆ ಕತ್ತೆಗಳಿಗೆ ಮದುವೆ ಮಾಡುವುದು, ಮಳೆರಾಯನಿಗೆ ಪೂಜೆ ಮಾಡುವುದು, ಪರ್ಜನ್ಯ ವ್ರತ ಮಾಡಿ ಮಳೆ ಬರಿಸುವೆನೆಂದು ಹೇಳುವ ಬೂಟಾಟಿಕೆಯ ಮಾತುಗಳೆಲ್ಲಾ ಶುದ್ಧ ವೈಜ್ಞಾನಿಕ ಅರಿವಿನ ಕೊರತೆಯಿಂದ ಉದ್ಭವವಾದ ಮೂಢನಂಬಿಕೆಗಳೇ ಆಗಿವೆ.

ಸಾವಿರಾರು ಮೂಢನಂಬಿಕೆಗಳಿಂದ ಇಂದು ಎಷ್ಟೋ ಮೂಕ ಪ್ರಾಣಿಗಳ ಬಲಿಯೂ ಆಗುತ್ತಿವೆ. ಮುಗ್ಧ ಅಮಾಯಕ ಮಾನವರ ಬಲಿಯೂ ಆಗಿವೆ. ಅಜ್ಞಾನ ಕೂಡಾ ಒಂದು ಶಾಪವೇ. ಆದರೆ ಜ್ಞಾನಿಗಳ ಮೂಢನಂಬಿಕೆಯು ಅಕ್ಷಮ್ಯವಾದ ಅಪರಾಧ ಎನ್ನಬಹುದು.

ಕುವೆಂಪು ಅವರು ಯುವಕರಿಗೆ ಕರೆ ಕೊಟ್ಟಂತೆ, ಯುವಕರು ನಿರಂಕುಶಮತಿಗಳಾಗಿ ಜನಮನದಲ್ಲಿ ವೈಚಾರಿಕ ಜಾಗೃತಿಯನ್ನು ಉಂಟು ಮಾಡಬೇಕು. ಆಗ ಮಾತ್ರ ನಮ್ಮ ಬುದ್ಧಿಗೆ ಕವಿದಿರುವ ಅಜ್ಞಾನದ ಮಬ್ಬು ತೊಲಗೀತು. ನಾವೆಲ್ಲ ಅಜ್ಞಾನದ ವಿರುದ್ಧ ಸಮರ ಸನ್ನದ್ಧರಾಗಬೇಕಿದೆ. ವಿಚಾರಕ್ರಾಂತಿಗೆ ಆಹ್ವಾನವನ್ನು ನೀಡಬೇಕಿದೆ. ಆಗ ಮಾತ್ರ ಮೂಢನಂಬಿಕೆಯ ಪ್ರಮಾಣ, ಅದರಿಂದಾಗುವ ಬೌದ್ಧಿಕ ನಷ್ಟ ಹಾಗೂ ಬುದ್ಧಿ ದಾರಿದ್ರ್ಯದ ಅನಾಹುತ ಕಡಿಮೆಯಾದೀತು.

**ಯಾವುದಾದರು ಎರಡು ಪ್ರಬಂಧಗಳನ್ನು ಬರೆಯಿರಿ:**

## ಬಿಡಿಸಿ ಬರೆಯಿರಿ:

ಹಳಗನ್ನಡ ಕವಿಗಳಲ್ಲಿ ಹಾಗೂ ಆಡು ಭಾಷೆಯಲ್ಲಿ ನಾವು ಸಾಮಾನ್ಯವಾಗಿ ಒಂದಕ್ಕಿಂತ ಹಲವು ಪದಗಳನ್ನು ಒಟ್ಟಿಗೆ ಕೂಡಿಸಿ ಬಳಸುವ ಪರಿಪಾಠವಿದೆ. ಅದು ಒಂದು ಸಮೂಹ ಪದವಾಗುತ್ತದೆ. ಕಾವ್ಯಗಳನ್ನು ಓದುಗರು ಸುಲಭವಾಗಿ ಅರ್ಥೈಸಿ ಕೊಳ್ಳಲು ಈ ಸಮೂಹ ಪದಗುಚ್ಚಗಳನ್ನು ಬಿಡಿಸಿ ಕೊಳ್ಳಬೇಕಾಗುತ್ತದೆ.ಉದಾ:**ಕಲ್ಮರಂ**=ಕಲ್+ಮರ,**ಜಗಜ್ಜನನಿ**= ಜಗತ್+ ಜನನಿ. **ಹೀಗೆ ಕೆಳಗೆ ಕೊಟ್ಟಿರುವ ಕೂಡುಪದಗಳನ್ನು ಬಿಡಿಸಿ ಬರೆಯಿರಿ.**

೧. ಅದರಿಚ್ಚೈ=..........................................

೨. ಅಪವಾದಮಾವರಿಸೆ=........................

೩. ಅಲ್ಲಿಗೊಯ್ಯದೆ=................................

೪. ಅಸದಳಮೆಂಬ=................................

೫. ಅಕ್ಷರಗಳಭ್ಯಾಸ=................................

೬. ಇಡಿದಿರುತಿರ್ದುದು=..........................

೭. ಇಪ್ಪತ್ತು=............................................

೮. ಉದ್ದಗಲ=........................................

೯. ಉಂಡೆಗಟ್ಟುವ=................................

೧೦. ಎಷ್ಟೊತ್ತು=........................................

೧೧. ಎಂಟ್ಟತ್ತು=........................................

೧೨. ಎಂದಷ್ಟೆ=..........................................

೧೩. ಎಂದಿಗಯ್ಯ=.....................................

೧೪. ಏಕೈಕ=...............................................

೧೫. ಒಂದ್ಯೆದು=.......................................

೧೬. ಕಟ್ಟೋಗರ=.....................................

೧೭. ಕಣ್ಣರಳಸು=.......................................

೧೮. ಕಣ್ಣೆದುರಿಗೆ=.....................................

೧೯. ಕಣ್ಣೊರೆಸಿಕೊ=..................................

೨೦. ಕಣ್ಮಲರ್=.........................................

೨೧. ಕತ್ತಿಡಿದು=..........................................

೨೨. ಕತ್ತೆತ್ತಿ=..........................................

೨೩. ಕಳೆವುದೆಂದಿಗೆ=................................

೨೪. ಕಂಪೊಗೆದ=....................................

೨೫. ಕಾಲಾವಧಿ=......................................

೨೬. ಕಾಲ್ಬಟ್ಟೆ=..........................................

೨೭. ಕಾವೇರಿ=........................................

೨೮. ಕಾಳೋರಗ=...................................

೨೯. ಕೂಗಾಟ=.......................................

೩೦. ಕೆಂಬಣ್ಣ=.........................................

೩೧. ಕೆಂಡಗಣ್ಣು=.....................................

೩೨. ಗೆಳೆಯರಿಬ್ಬರೂ=...............................

೩೩. ಗುಪ್ತಾರಾಧನೆ=.................................

೩೪. ಜಗದೊಳುತ್ತಮರ=...........................

೩೫. ಜಲಾಂಜಲಿ=....................................

೩೬. ತಣ್ಣೀರ್ದಳೆದು=................................

೩೭. ತಲೆಗೊಡಹು=.................................

೩೮. ತಿಳಿಯದಾಯಿತು=............................

೩೯. ದಡಿಗವೆಣ=......................................

೪೦. ದಿಕ್ಕೆಟ್ಟು=..........................................

೪೧. ದಿಕ್ಸೂಚಿ=........................................

೪೨. ದಿಗ್ದೇಶ=..........................................

೪೩. ದಿವ್ಯಾನ್ನ=........................................

೪೪. ನಾಲ್ವಡಿ=.........................................

೪೫. ನ್ಯಾಯಾಲಯ=................................

೪೬. ನೂರಾರು=......................................

೪೭. ನಿನಗಿನ್ನೆಗಂ=...................................

೪೮. ನಿನ್ನನೊಲ್ಲದೆ=..................................

೪೯. ಪನ್ನಗಾಭರಣ=...............................

೫೦. ಪುಲ್ಮೇವು=........................................

೫೧. ಪುರಿಗಣೆ=..........................................

೫೨. ಪೊಗೆದಳೆದಗ್ನಿಹೋತ್ರ=.......................

೫೩. ಪೋಗದಿರ್ದೊಡೆ=............................

೫೪. ಬನದೊಳಿರಿಸಿ=..................................

೫೫. ಬಾಯೆಂದೆನೆಗೆ=...............................

೫೬. ಬಾಲಕರಾಶ್ರಮ=...............................

೫೭. ಬಿದ್ದಳಂಗನೆ=....................................

೫೮. ಬೆಳ್ಗೊಡೆ=..........................................

೫೯. ಭವದ್ವಿಕ್ರಮ=......................................

೬೦. ಭುಜಾಸ್ಫೋಟ=..................................

೬೧. ಮಹಾಟವಿ=.......................................

೬೨. ಮಹಾಟ್ಟಹಾಸ=................................

೬೩. ಮಹಾತ್ಮ=.........................................

೬೪. ಮಹೋನ್ನತಿ=..................................

೬೫. ಮಹೋಗ್ರ=........................................

೬೬. ಮಹೋತ್ಸಾಹ=.................................

೬೭. ಮಿಡಿದಾರ್ತೆಯಾಗಿ=..........................

೬೮. ಮೀರಲರಿಯದೆ=.............................

೬೯. ಮುನಿಪೋತ್ತಮ=...............................

೭೦. ಮೂಲೋತ್ಪಾಟನೆ=............................

೭೧. ಮೆಳ್ಳಗಣ್ಣು=......................................

೭೨. ಮೈಯೆಲ್ಲ=.........................................

೭೩. ರಘುಕುಲೋದ್ಭವಂ=.........................

೭೪. ರಣಾಜಿರ=.........................................

೭೫. ರಸಾನುಭವ=....................................

೭೬. ಲಕ್ಷಾಂತರ=......................................
೭೭. ಲಿಂಗಾರ್ಚನೆ=..................................
೭೮. ಲಿಂಗಾಭಿಮಾನಿ=..............................
೭೯. ಲೋಕಾಧಿಪತಿ=................................
೮೦. ವದನಾರವಿಂದ=..............................
೮೧. ವಿನಯೋಲ್ಲಂಘನ=..........................
೮೨. ವಿಭುವಿನಾಜ್ಞೆ=..................................
೮೩. ವೈದ್ಯಾಧಿಕಾರಿ=.................................
೮೪. ಶಿವಾವಾಸ=.......................................
೮೫. ಸಸ್ಯಾಳಿ=...........................................
೮೬. ಸರ್ವಾಂಗ=.....................................
೮೭. ಸಹಸ್ರಾಕ್ಷ= .....................................
೮೮. ಸುಮ್ಮನಿರುವರೆ=...............................
